೧೯೩೭ ನೆಯ ಇಸ್ವಿಯ

ಮುಂಬಯಿ ಯುನಿವ್ಹರ್ಸಿಟಿಯ ಮ್ಯಾಟ್ರಿಕ್ಯುಲೇಶನ

ಪರೀಕ್ಷೆಗೆ ನಿಯಮಿಸಲ್ಪಟ್ಟ

ಪದ್ಯಸಂಗ್ರಹ.



ಮುಂಬಯಿ ಯುನಿವ್ಹರ್ಸಿಟಿಯ ಪರವಾಗಿ

ಪ್ರಕಾಶಕರು

ಹಿತಚಿಂತಕ ಪ್ರಿಂಟಿಂಗ ಪ್ರೆಸ್

ವಿಜಾಪುರ.

೧೯೩೫

ಬೆಲೆ ೮ ಆಣೆ.

Note.

೧ನೇ ಆವೃತ್ತಿ. ೧೫೦೦ ಪ್ರತಿಗಳು. ೧೯೩೫.

Printed and published by Rao-saheb **P. G Halkatti,**
at the **Hitachintaka Printing Press** No. 1620
(A) Upli Buruz Bijapur, for the
University of Bombay.

ಪ್ರಸ್ತಾವನೆ.



ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡು ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರತಕ್ಕ ವಿದ್ಯಾರ್ಥಿಗಳಿಗಾಗಿ ಒಂದು ಪಠ್ಯಪುಸ್ತಕವನ್ನು ಮುಂಬಯಿ ವಿಶ್ವವಿದ್ಯಾಲಯದವರೇ ಪ್ರಕಟಮಾಡಬೇಕೆಂಬ ಕ್ರಮವು ಈ ವರ್ಷದಿಂದಲೇ ಪ್ರಾರಂಭವಾಯಿತು. ಆದಕ್ಕನುಸರಿಸಿ ೧೯೩೬ ನೇ ಇಸ್ವಿಯ ಪರೀಕ್ಷೆಗಾಗಿ ಕನ್ನಡ ಅಭ್ಯಾಸ ನಿಯಾಮಕ ಮಂಡಳಿಯವರು ಈ ಪುಸ್ತಕವನ್ನು ಸಿದ್ಧಪಡಿಸಿದರು. ಇದರಲ್ಲಿ ಜೈಮಿನಿಭಾರತದ ನಾಲ್ಕ ನೇಯ ಸಂಧಿ, ಚನ್ನಬಸವ ಪುರಾಣದ ನಾಲ್ಕನೇಯ ಕಾಂಡ ಒಂದ ನೇಯ ಸಂಧಿ, ಮತ್ತು ಹರಿಹರನ ಪುರಾತನರ ರಗಳೆಯಲ್ಲಿಯ ಕಾರಿ ಕಾಲಮ್ಮೆಯ ರಗಳೆಗಳು ಅಡಕವಾಗಿವೆ. ಇದರಲ್ಲಿ ಅವುಗಳನ್ನು ಸೇರಿ ಸಲು ಅವವುಗಳ ಸಂಪಾದಕರ ಒಪ್ಪಿಗೆಯು ದೊರೆತಿದೆ; ಅದಕ್ಕಾಗಿ ವಿಶ್ವವಿದ್ಯಾಲಯವು ಅವರಿಗೆ ಬಹು ಋಣಿಯಾಗಿರುವದು.

ಶಿ. ಚ. ನಂದಿಮಠ

ಮುಂಬಯಿ ವಿಶ್ವವಿದ್ಯಾಲಯ — ಚೇಅರಮನ್ನ

೧೫-೫ ೧೯೩೫ — ಕನ್ನಡ ಅಭ್ಯಾಸ ನಿಯಾಮಕ ಮಂಡಳ

ಅನುಕ್ರಮಣಿಕೆ.





ಜೈಮಿನಿ ಭಾರತವು.

ನಾಲ್ಕನೆಯ ಸಂಧಿ.

ಲಕ್ಷ್ಮೀಶ.

ಈತನು ಜೈಮಿನಿ ಭಾರತವನ್ನು ಬರೆದಿದ್ದಾನೆ. ಇವನು ಶ್ರೀವೈಷ್ಣವ ಕವಿ. ಭಾರದ್ವಾಜ ಗೋತ್ರದವನು. ಇವನ ತಂದೆ ಅಣ್ಣಮಾಂಕ. ಇವನ ಸ್ಥಳ ದೇವನೂರು. ಕೆಲವರು ಇದು ಕಡೂರ ತಾಲೂಕಿನಲ್ಲಿರುತ್ತ ವೆಂತಲೂ, ಬೇರೆ ಕೆಲವರು ಇದು ಸುರಪುರವೆಂತಲೂ ತಿಳಿದಿದ್ದಾರೆ. ಕವಿಗೆ ಲಕ್ಷ್ಮೀಪತಿ ಎಂಬ ಹೆಸರೂ ಉಂಟು. ಈತನು ಸುಮಾರು ೧೭೦೦ ರಲ್ಲಿರಬಹುದೆಂದು ತೋರುತ್ತದೆ.

ಈತನಿಗೆ ಕರ್ಣಾಟಕ-ಕವಿಚೂತ-ವನಚೈತ್ರ ಎಂಬ ಬಿರುದಿದ್ದಂತೆ ತಿಳಿಯುತ್ತದೆ

ಮೈಸೂರ ಅರಮನೆಯ ಮಹಾವಿದ್ವಾನ್ ಪಂಡಿತ ಕರಿಬಸವ ಶಾಸ್ತ್ರಿಯವರು ಜೈಮಿನಿ ಭಾರತವನ್ನು ೧೨ ಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಕಟಗೊಳಿಸಿದರು. ಅವರ ನಾಲ್ಕನೆಯ ಆವೃತ್ತಿಯು ೧೯೧೫ ರಲ್ಲಿ ಪ್ರಕಟವಾಗಿದೆ. ಇದು ಜೈಮಿನಿ ಭಾರತದ ಎಲ್ಲ ಪ್ರತಿಗಳಲ್ಲಿ ಶುದ್ಧವಾದುದು. ಇದನ್ನು ೧೯೩೨ ರಲ್ಲಿ ಬೆಂಗಳೂರು ಶ್ರೀವೆಂಕಟೇಶ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾದ ಒಂದು ಪ್ರತಿಯ ಸಹಾಯ ದಿಂದ ತಿದ್ದಿ ಈಗಿನ ಪ್ರತಿಯನ್ನು ಪ್ರಸಿದ್ಧಿಸಿದ್ದಾಗಿದೆ.

ಜೈಮಿನಿ ಭಾರತವು.

ನಾಲ್ಕನೆಯ ಸಂಧಿ.

ಸೂಚನೆ॥ ಜಡಿದು ಭದ್ರಾವತಿಯೊಳಮಲತರ ವಾಜಿಯಂ ।
ಪಿಡಿದು ಕಲಿ ಯೌವನಾಶ್ವನ ಚಾತುರಂಗಮಂ ।
ಬಡಿದವನನಲ್ಲಿ ಕಾಣಿಸಿಕೊಂಡು ಹಸ್ತಿನಾವತಿಗೆ
ಭೀಮಂ ಬಂದನು

ಜನಮೇಜಯಕ್ಷಿತಿಪ ಕೇಳ್ ಪ್ರಣಯಕಲಹದೊ ।
ಳ್ಮುನಿದ ಕಾಂತೆಯ ಕುಪಿತವದನಾರವಿಂದದೊ ।
ಳ್ಮನುಗುವೆಳನಗೆ ತೋರುವನ್ನೆಗಂ ಚಿತ್ತದೊಳ್ಕುದಿವ ನಾಗರಿಕನಂತೆ ॥
ಅನಿಲಸುತನಾ ಹಯಂ ಪೋಗಲ ಮೊರಮುಡುವಿನಂ ।
ಮನದುಬ್ಬೆಗದೊಳೆ ಚಿಂತಿಸಿ ಮತ್ತೆ ಕರ್ಣಜಾ ।
ತನ ವದನಮಂ ನೋಡುತನುತಾಪದಿಂ ತನ್ನಪಳಿದುಕೊಳುತಿಂತೆಂದನು ॥೧॥

ಉದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗು ।
ರುದ್ರೋಹವೊಂದಚ್ಯುತನೊಳಾಡಿ ಹೊಳಿದ ದ್ವೈ ।
ಪದ್ರೋಹವೆರಡರಸನವಸರಕೊದಗದ ಸ್ವಾಮಿದ್ರೋಹವೈದೆ ಮೂರು ॥
ಮಪ್ರಚಿತವೀರಪ್ರತಿಜ್ಞೆ ಕೈಗೂಡದಾ ।
ತ್ಮದ್ರೋಹಮದುವೆ ನಾಲ್ಕಿವರ ಸಂಗಡಕೆ ಧ ।
ರ್ಮದ್ರೋಹವೈದಾಗದಿಹುದೆ ತನಗಶ್ವಮಂ ಕಂಡು ಕೊಂಡೊಯ್ಯದಿ
ರಲು ॥೨॥

ಪುಸಿದನೆ ಬಯಲ್ಗೆ ವೇದವ್ಯಾಸಮುನಿ ಪುಸಿದೊ ।
ಡಸುರಾರಿ ಸೈರಿಪನೆ ಸೈರಿಸಿದೊಡೊಳ್ಳಿತೆಂ ।
ದುಸಿರುವುವೆ ಶಕುನಂಗಳುಸಿರಿದೊಡಭಾಗ್ಯನೇ ಭೂವರನಭಾಗ್ಯನಾಗೆ ॥
ಮುಸುಳಿಪುದೆ ಶಶಿಕುಲಂ ಮುಸುಳಿಸಿದೊಡದ್ದಪುದೆ ।
ವಸುಧೆಯದ್ದೊಡೆ ತನ್ನ ನುಡಿ ಬಂಜೆಯಪ್ಪುದಿದು ।
ಪೊಸತದೇಂ ಪಾಪದಿಂ ಕಾಣಿಸದೊ ತುರಗಮೆಂದನಿಲಜಂ ಚಿಂತಿಸಿದನು ॥೩॥

ಪಾತಕಿಗೆ ನುಡಿವ ಸೊಲ್ಲುಸಿಯುಹುದು ವರದಾರ ।
ಸೂತಕಿಗೆ ನೆನೆದೆಣಿಕೆ ಬಯಲಹುದು ಗುರುವಿಪ್ರ ।
ಘಾತಕಿಗೆ ಕಾಣ್ಬೊಡವೆ ಮರೆಯುಹುದು ತಥ್ಯಮಿದು ಜಗವೊಳೆನಗಾವ ಭವವ ।
ಜಾತಕಿಲ್ಬಿಷವೊ ಯಾದವಕುಲಮಹಾಂಬುನಿಧಿ ।
ಶೀತಕಿರಣಂ ತನ್ನ ಶರಣರನುಳಿವನೊ ಹಯ ।
ವ್ರಾತಕಿಂತಕಟ ಕಾಣಿಸವೊ ಶಿವಶಿವಾ ಯೆಂದನಿಲಜಂ ಚಿಂತಿಸಿದನು ॥೪॥

ತಲ್ಲಕ್ಷಣಂಗಳಿಂ ಸಲ್ಲಲಿತವಾದ ಹಯ ।
ಮಿಲ್ಲಿ ವಿಧಿವಶದಿಂದಮಿಲ್ಲದಿರ್ದೊಡೆ ಧರಾ ।
ವಲ್ಲಭನ ರಂಜಿಸುವ ಮೆಲ್ಲಡಿಗಳಂ ಕಾಣಬಲ್ಲೆನೆ ಮಹೀತಳದೊಳು ॥
ಎಲ್ಲಿರ್ದೊಡಾ ತಾಣವಲ್ಲಿ ಮೊಕ್ಕರಿಸಿ ತಂ ।
ದಲ್ಲದೆನ್ನಯ ಭಾಷೆ ಸಲ್ಲದಿದಕೆಂತೆನುತೆ ।
ಘಲ್ಲಿಸುವ ಚಿಂತೆಯಿಂ ನಿಲ್ಲದೆ ವೃಕೋದರಂ ತಲ್ಲಣಿಸುತಿರುತಿರ್ದನು ॥೫॥

ಅನಿತರೊಳನೇಕ ಸೇನೆಗಳ ಸನ್ನಾಹದಿಂ ।
ಘನವಾದ್ಯ ರಭಸದಿಂ ಸೂತರ ಪೊಗಳ್ಕೆಯಿಂ ।
ದನುಕರಿಸಿದಮಲವಸ್ತ್ರಾಭರಣಗಂಧಮಾಲ್ಯಾದಿಗಳ ಪೂಜೆಯಿಂದೆ ॥
ವಿನುತಾತಪತ್ರಚಮರಂಗಳಿಂದೆಡಬಲದೊ ।
ಳನುವಾಗಿ ವಾಘೆಯಂ ಪಿಡಿದು ನಡೆತಪ್ಪ ನೃಪ ।
ತನುಜರಿಂದಾ ಹಯಂ ನೀರ್ಗೆ ಪೊರಮಟ್ಟು ಸಂಭ್ರಮದೊಳೈತರುತಿರ್ದುದು ॥೬॥

ವಿಧುಬಿಂಬಮುದಯಮಂ ಕಂಡೊತ್ತರಿಸಿ ಪಯೋ ।
ನಿಧಿ ಮೇರೆವರಿದುಕ್ಕುವಂತೆ ನಿರ್ಮಲವಾದ ।
ಸುಧೆಯೇಳ್ಗೆಯಂ ಕಂಡು ಪುಳಕಂ ನೆಗಳ್ದು ಜಂಭಾರಿ ಸಂಭ್ರಮಿಸುವಂತೆ ।
ಅಧಿಕಬಲಿಯೌವನಾಶ್ವಾವನಿಪನೈಶ್ವರ್ಯ ।
ವಧುವಿನ ಕಟಾಕ್ಷದಂತೊಪ್ಪುವ ತುರಂಗಮಂ ।
ಕುಧರೋಪಮಾನಪವಮಾನಜಂ ಕಂಡು ನೆರೆ ಸುಮ್ಮಾನಮಂ ತಾಳ್ದನು ॥೭॥

ಚತುರವಪಗತಿಯು ಸರಸಧ್ವನಿಯು ವರ್ಣವೊ ।
ಛಿತದಲಂಕಾರದ ಸುಲಕ್ಷಣದ ಲಾಲಿತ ।
ಶ್ರುತಿರಂಜನದ ವಿಶೇಷಾರ್ಥಸಂಚಿತದ ವಿಸ್ತಾರದಿಂ ಪೊಸತೆನಿಸುವ ॥
ನುತಸತ್ಕವಿಪ್ರೌಢತರ ಸುಪ್ರಬಂಧದಂ ।
ತತಿಮನೋಹರವೆನಿಪ ವಾಜಿಯಂ ಕಂಡು ಹ ।
ರ್ಷಿತನಾಗಿ ನೋಡುತಿರ್ದಂ ಕಲಾವಿದನಪ್ಪ ಮಾರುತಿ ಮಹೋತ್ಸವ
ದೊಳು ।೮॥

ಮೂಜಗದೊಳೀ ತುರಂಗಮವೆ ಪೊಸತೆಂದು ವರ ।
ವಾಜಿಯಂ ನಿಟ್ಟಿಸುವ ಭೀಮಸೇನನ ಪದಸ ।
ರೋಜಯುಗಳಕ್ಕೆರಗಿ ಮೇಘನಾದಂ ನೀವು ನೋಳ್ಪುದೆನ್ನಧಟನೀಗ ॥
ವಾಜಿಯಂ ತಹೆನೆನುತ್ತಲ್ಲಿಂ ತಳರ್ದು ಮಾ ।
ಯಾಜಾಲಮಂ ಬೀಸಿದಂ ನಭೋಮಂಡಲ ।
ಕ್ಕಾಜನವನಶ್ವರಕ್ಷೆಯ ಬಲಂ ಕಂಗೆಡಲ್ ಭೂಪ ಕೇಳದ್ಭುತವನು ॥೯॥

ತುರುಗಿತೆತ್ತೆತ್ತಲುಂ ಪ್ರಳಯಕಾಲದ ಮೇಘ ।
ಮೆರಗುತಿವೆ ಬರಿಯ ಬರಸಿಡಿಲ್ಗಳೆತ್ತೆತ್ತಲುಂ ।
ಕರೆಯುತಿದೆ ಬಿರುಗಾಳಿ ದೂಳನೆತ್ತೆತ್ತಲುಂ ಕತ್ತಲೆಗಳಿಟ್ಟಣಿಸಿವೆ ॥
ತೆರೆಯಬಾರದು ಕಣ್ಣ ಮರೆದು ಕಣ್ದೆರೆಯೆ ದಿ ।
ಕ್ಕರಿಯಬಾರದು ಮಹಾದ್ಭುತಮೆತ್ತಣದೊ ಜಗ ।
ವೆರೆಯನೇ ಬಲ್ಲನೆನುತಿರ್ದುದಾ ಸೈನಿಕಂ ಹೈಡಿಂಬಿಕೃತಮಾಯೆಗೆ ॥೧೦॥

ಗಗನದೊಳ್ಸುಳಿಯುತ ನಿಮಿಷನೊರ್ವನಿವನ ಮಾ ।
ಯೆಗೆ ಭಯಂಗೊಂಡು ಕಡುವೇಗದಿಂ ಪೋಗಿ ವ ।
ಜ್ರಿಗೆ ದೂರಲಾತಂ ಚರರ ಕಳುಪಿ ಕೇಳಿಸಿದೊಡೀತನಾಂ ಭೀಮಸುತನ ॥
ಮಗನಧ್ವರಕೆ ಹಯವನೊಯ್ದಪೆನೆನಲ್ಕವಂ ।
ಮಗುಳದಂ ಪೋಗಿ ಸುರಪತಿಗೆ ಬಿನ್ನೈಸೆ ನಸು ।
ನಗುತವಂ ದೇವರ್ಕಳೊಡಗೂಡಿ ಬಂದನಲ್ಲಿಗೆ ಸಮರಮಂ ನೋಡಲು ॥೧೧॥

ಇತ್ತಲೀ ಕುದುರೆಗಾಪಿನ ಭಟರ ಕಣ್ಗೆ ಬ ।
ಲ್ಗತ್ತಲೆಗಳಂ ದೂಳ್ಗಳಂ ಕವಿಸಿ ಭೀತಿಯಂ ।
ಬಿತ್ತಿ ನೆಲಕಿಳಿದು ಪಡಿವಾಘೆಯಂ ಪಿಡಿದರಸುಮಕ್ಕಳಂ ಬೀಳ ಹೊಯ್ದು ॥

ತತ್ತುರಗಮಂ ಕೊಂಡು ಚಿಗಿದನಾಗಸಕೆ ಸರ ।
ದತ್ತಣಿಂದಂಚಿ ಬೆಳ್ದಾವರೆಯನಳ್ತಿಯಿಂ ।
ಕಿತ್ತು ಸಭಕೇಳ್ವಂತೆ ಮೇಘನಾದಂ ಭೀಮಕರ್ಣಜರ್ಜರಗಾಗಲು ॥೧೨॥

ರಾಹು ತುಡುಕಿದ ಚಂದ್ರಮಂಡಲವೊ ಗರುಡನು ।
ತ್ಸಾಹದಿಂದೆತ್ತಿಕೊಂಡೊಯ್ವಮೃತಕಲಶವೊ ಬ ।
ಲಾಹಕಂ ತಾಳ್ದ ಬೆಳ್ಮಿಂಚಿನೊಬ್ಬುಳಿಯೊ ಮೊಸತೆನೆ ಘಟೋತ್ಕಚತನ
ಯನು ॥
ಬಾಹುಬಲದಿಂದೆಡದ ಕಕ್ಷದೊಳಿರುಂಕಿದ ಮ ।
ಹಾಹಯಂ ಗಗನಮಾರ್ಗದೊಳ್ಳೈದುತಿರೆ ಕುದುರೆ ।
ಗಾಹಿನ ಚತುರ್ಬಲಂ ಕಂಡು ಬೊಬ್ಬಿರಿದಾರ್ದು ಕಾಳಗಕೆ ಮುಂಕೊಂ
ಡುದು ॥೧೩॥

ಜೋಡಾಗಿ ಪೂಡುವೊಡೆ ಸಾಲದೇಳೀಹಯಂ ।
ಜೋಡಿಸುವೆನೀ ತುರಗಮಂ ತನ್ನ ತೇರ್ಗೆಂದು ।
ಗಾಡದಿಂ ಬಾಂಗೆತ್ತಿಕೊಂಡೊಯ್ದುದಿರನಬ್ಜಸಖನೆಂಬ ಶಂಕೆಯಿಂದೆ ॥
ರೂಡಿಸಿದ ಮಂದೇಹಸೇನೆ ಬಂದೆಣ್ದೆಸೆಗೆ ।
ಮಾಡಿದುದೊ ಮುತ್ತಿಗೆಯನೆನೆ ಮೇಘನಾದನ ವಿ ।
ಭಾಡಿಸಿ ಚತುರ್ಬಲಂ ಕವಿಯೆ ಲೆಕ್ಕಿಸದವಂ ಸೈವರಿದನಾಗಸದೊಳು ॥೧೪॥

ಬಳಿಕಾ ಬಲಂ ಕಂಡುದಭ್ರಮಾರ್ಗದೊಳಿ ಮುಂ ।
ದಳೆಯುತಿಹ ಮೇಘನಾದನನೆಲವೊ ಬರಿ ಮಾಯೆ ।
ಗಳನೆಸಗಿ ಮೋಸದೊಳ್ತುರಗಮಂ ಕೊಂಡು ಬಾಂದಳಕಡರ್ದೊಡೆ ನಿನ್ನನು ॥
ಉಳುಹುವರೆ ಯೌವನಾಶ್ವನ ಸುಭಟರಕಟ ನಿ ।
ನ್ನಳವನರಿಯದೆ ಬಂದು ಕೆಣಕಿದೆಯಲಾ ಜೀವ ।
ದುಳಿವನಾರೈದುಕೊಳ್ಳೆನುತಾತನಂ ಮುತ್ತಿಕೊಂಡು ಕವಿದಿಸುತಿ
ರ್ದುದು ॥೧೫॥

ಪಿಂತಿರುಗಿ ನೋಡಿದಂ ಕಂಡೆನಲ್ಲವೆ ಜೀವ ।
ಮಂ ತೆಗೆದುಕೊಂಡೊಯ್ವ ಕಾಲನಂ ಪೆಣನಟ್ಟು ।
ಮಂತಾಯ್ತಲಾ ನಿಮ್ಮ ಸಾಹಸಂ ಜಾಗು ಜಾಗೆನುತೆ ಹೈಡಿಂಬಿ ನಗುತೆ ॥

ಸಂತತಂ ಕರೆವ ಕಲ್ಮಳೆಗಳಂ ಸೃಜಿಸಿ ಬಲ ।
ಮಂ ತವೆ ಪೊರಳ್ಚಿ ಮುಂದಳೆಯಲಾ ಪ್ರಯ್ಯಲೂ ।
ರಂ ತಾಗೆ ಪೊರಮಟ್ಟುದಾ ನೃಪನ ಸೈನ್ಯಮಕ್ಷೋಹಿಣಿಯ
ಗಣನೆಯಿಂದ ॥೧೬॥

ತನ್ನೊಳಿರ್ದಮಲ ಹಯರತ್ನಮಂ ಕೊಂಡು ಕಳ ।
ವಿನ್ನಭಸ್ಥಳಕೊಯ್ದನೆಂಬ ಕಡುಗೋಪದಿಂ ।
ಜೆನ್ನಬಿಡದೆದ್ದು ನಡೆದುದೊ ಗಗನಕೀ ಧರಣಿಯೆನೆ ಘಟೋತ್ಕಚತನುಜನು ॥
ಮುನ್ನ ಮಾಡಿದ ರಜದ ಮಾಯೆಗಿಮ್ಮಡಿಸಿ ಪಡಿ ।
ಯನ್ನೆಗಳ್ಚಿದರೊ ವೈರಿಗಳೆನೆ ರಣೋತ್ಸಾಹ ।
ದಿನ್ನಡೆವ ಚಾತುರಂಗದ ಪದಹತಕ್ಷೇಳ್ವ ದೂಳ್ಮಸಗಿತಂಬರದೊಳು ॥೧೭॥

ಪಟಹ-ನಿಸ್ಸಾಣ-ತಮ್ಮಟ-ಭೇರಿಗಳ ಸಮು ।
ತ್ಕಟನಾದಮುಗ್ರಗಜಘಟೆಯ ಘಂಟಾರವಂ ।
ಚಟುಲ ವಾಜಿಗಳ ಖುರಪುಟದ ರಭಸಂ ಹರಿಸುತಿಹ ರಥದ ಚಕ್ರಧ್ವನಿ ॥
ಲಟಕಟಿವ ಸಮರಲಂಪಟರ ಭುಜಗಳ ಹೊಯ್ಲು ।
ಭಟರ ಚಾಪಸ್ವನಂ ಪಟುತರದ ಬೊಬ್ಬೆಯಾ ।
ರ್ಭಟೆಗಳೊಂದಾಗಿ ಸಂಘಟಿಸಿತೀ ಬ್ರಹ್ಮಾಂಡಘಟ ಮಿಂಮೊಡೆಯದಿರ
ದೆನೆ ॥೧೮॥

ಎತ್ತಿ ಬಹ ಸತ್ತಿಗೆಯ ಮೊತ್ತಂಗಳೆತ್ತಲುಂ ।
ಕತ್ತಲಿಸೆ ಪೊತ್ತ ಮಸೆವೆತ್ತ ಬಲ್ಗತ್ತಿಗಳ ।
ಕಿತ್ತು ಭಟರೆತ್ತಿ ಜಡಿಯುತ್ತಿರಲ್ಕತ್ತ ಬೆಳಗಿತ್ತವವು ಮತ್ತೆ ಬಲಕೆ ॥
ಸುತ್ತಲುಂ ಕೆತ್ತವೋಲ್ಮತ್ತಗಜಮೊತ್ತರಿಸಿ ।
ಮುತ್ತಿ ನಡೆಯುತ್ತಿಲರನೊತ್ತಿ ನಿಲಿಸುತ್ತಿರಲು ।
ಪತ್ತ ಚಮರೋತ್ಥಿತಮರುತ್ತತಿಯೊಳುತ್ತಮಹಿಮೋತ್ತರಂ ಬಿತ್ತರಿಸಿತು ॥೧೯॥

ತಡೆಯೊಳಿರ್ದಖಿಳಮೇಘಂಗಳಂ ಪ್ರಳಯದೊ ।
ಳ್ಬಿಡಲು ಘುಡುಘುಡಿಸುತ್ತೆ ನಡೆವಂದದಿಂದೆ ಬೊ ।
ಬ್ಬಿಡುತವಧಿಯಿಲ್ಲದೈತರುತಿರ್ಪ ಯೌವನಾಶ್ವನ ಸೈನ್ಯಮಂ ನೋಡುತೆ ॥

ಎಡಗೆಯ್ಯ ತುರಗಮಂ ಬಲಿದಳವಡಿಸಿ ತನ್ನ।
ಕಡುಗಮಂ ಜಡಿದನಿಬರೆಲ್ಲರಂ ಚಿತ್ರದೊ।
ಳ್ಗಡಣಿಸಿದೆ ಕಲಿ ಘಟೋತ್ಕಚಸುತಂ ನಸುನಗುತೆ ಗಗನದೊಳ್ಬರುತಿ
ರ್ದನು ॥೨೦॥

ಡಿಳ್ಳವಾದುದೆ ಯೌವನಾಶ್ವಭೂಪತಿಯ ಬಲ।
ವೊಳ್ಳಿಗರ ನೂಕು ನೂಕಾವೆಡೆಯೊಳಾ ಕುದುರೆ।
ಗಳ್ಳನಂ ತೋರು ತೋರೆನುತೆ ನಡೆತಂದು ಹೈಡಿಂಬಿಯಂ ಮುತ್ತಿಕೊಂಡು॥
ಒಳ್ಳಿತೋ ವೀರ ಹಯಚೋರ ಜೀವದೊಳಾನೆ।
ಯುಳ್ಳೊಡೀ ಕುದುರೆಯಂ ಬಿಟ್ಟು ಸಾಗಲ್ಲದೊಡೆ।
ಕೊಳ್ಳಾ ಮಹಾಸ್ತ್ರಪ್ರತತಿಯನೆಂದಂಬರವನಂಬಿನಿಂ ತುಂಬಿಸಿದರು ॥೨೧॥

ನಿಮ್ಮ ರಾಯನ ಪೊರೆಯ ಪರಿವಾರದೊಳ್ನೀವೆ।
ದಿಮ್ಮಿದರೊ ಮತ್ತೆ ಕೆಲರೊಳರೊ ಕಳವಲ್ಲ ಹಯ।
ಮಮ್ಮೊಗದ ಮುಂದೆ ಕೊಂಡೊಯ್ವೆನಾರ್ಪೊಡೆ ಶಕ್ತಿಯಿಂ ಬಿಡಿಸಿಕೊಳ್ಳ
ಬರಿದೆ॥
ಉಮ್ಮಳಿಸಬೇಡ ನೀವತಿಸಾಹಸಿಗಳಾದೊ।
ಡೊಮ್ಮೆ ಹಮ್ಮೈಸದಿರಿ ನಾಕೆಂದು ಮೇಘನಾ।
ದಮ್ಮಹಾಮಾಯಾಭಯಂಗಳಂ ಸೃಜಿಸಿದಂ ಮೂಜಗಂ ತಲ್ಲಣಿಸಲು ॥೨೨॥

ಮೊಡೆವ ಸಿಡಿಲ್ಗರೆವ ಮಳೆ ಜಡಿವ ಕಲ್ಗುಂಡು ದೂ।
ಳಿಡುವ ಬಿರುಗಾಳಿ ಕಂಗೆಡಿಪ ಕತ್ತಲೆ ಮೇಲೆ।
ಕೆಡೆವ ಗಿರಿತರುಗಳುರೆ ಕಡಿವ ವಿವಿಧಾಯುಧಂ ನಡುವ ಶಸ್ತ್ರಾಸ್ತ್ರಂಗಳು॥
ಪಿಡಿವ ಪುಲಿಕರಡಿ ಬಾಯ್ಬಿಡುವ ಭೂತಂಗಳಸು
ಗುಡಿವ ಪಾವುಗಳಟ್ಟಿ ಸುಡುವ ಕಾಳ್ಕಿಚ್ಚುಳಿಯ।
ಗುಡವವನ ಮಾಯೆಯಂ ತಡೆವರಿಲ್ಲಾಬಲಂ ಪುಡಿವಡೆದುದೇವೇಳ್ವೆನು ॥೨೩॥

ಮಾಯೆಯಿಂ ಪಡೆಯೆಲ್ಲಮಂ ಕೊಂದು ಹಯಮಂ ವಿ।
ಹಾಯಸಪಥದೊಳೊಯ್ವ ಹೈಡಿಂಬಿಯಂ ಕಂಡ।
ಜೇಯರಂಬರದ ವಿವರಂಗಳಂ ಪುಗುವೆಂಟುಸಾವಿರ ಮಹಾರಥರನು॥

ಆ ಯೌವನಾಶ್ವನೃಪನಪ್ಪಿದೊಡೆ ಸಭೆಯೊಳಸ ।
ನಾಯುಧಶೂರನ ಮಾರ್ಗಮಂ ಕಟ್ಟಿ ನಿಲ್ಲು ಖಳ ।
ನಾಯುಧಿರ್ಬಿಡು ಬಿಡು ತುರಂಗಮವನೆನುತೆ ಸ್ವೈಗರವರಂಬಿನ ಮಳೆ
ಯನು ॥೩೪॥

ವೀರರಹುದೋ ಜಗಕೆ ನೀವಲಾ ಸ್ವಾಮಿಹಿತ ।
ಕಾರಿಗಳ್ತಲೆಯಾನೆಮಿಳ್ಳಿಸುತೆ ಪೈಡಿಂಪ ।
ತೋರ ಗದೆಯಿಂದವರ ತೇರ್ಗಳಂ ಚಾಪಬಾಣಂಗಳಂ ಕುದುರೆಗಳನು ।
ಸಾರಥಿಗಳಂ ಧ್ವಜಪತಾಕೆಗಳನಪ್ಪಳಿಸಿ ।
ನಾರುಪಂ ಜರಿಸಿ ಕಡುವೇಗದಿಂದ್ಮತಂದು
ಮಾರುತಸುತನ ಮುಂದೆ ನಿಲುತಿರ್ದನನ್ನೆಗಂ ಮತ್ತೆ ಪತಿಬಲಮೊದ
ಗಿತು ॥೩೫॥

ಹರಿಗಳಿಂ ನಾಗಂಗಳಿಂ ಸ್ಯಂದನಂಗಳಿಂ ।
ವರಚಾಲಕದಳಿಗಳ ಪುಂಡರೀಕಂಗಳಿಂ ।
ಸುರಗಿ ಖಡ್ಗಂಗಳಿಂ ನಡೆವ ಕಾಂತಾರದಂತೆಸೆವ ಚತುರಂಗಮೂಡನೆ ।
ಭರದಿಂ ಸುವೇಗನೆಂಬಾ ಯೌವನಾಶ್ವಭೂ ।
ವರನ ತನುಜಾತನಾಹವಕೆ ನಿರ್ಘೀತನು ।
ಬ್ಬರದ ಬಿಲ್ಬಿರುಮಿನಬ್ಬರದ ಕೋಲಾಹಳಕೆ ಧರೆ ಬಿರಿಂದು ನಡೆತಂದನು ॥೩೬॥

ಅಂಬರದೊಳಿಟ್ಟಿಸಿದೊಡೆ ನಮ್ಮ ರಥಿಕರ್ಕ ।
ಳಂ ಬಗೆಯದಹಿತಂ ಹಯಂ ಜವಸಿ ಸೈವರಿವ ।
ನಂಬುದಂ ಕೇಳ್ದಾಗಳಾ ಯೌವನಾಶ್ವಭೂಪಂ ತಾನೆ ಕೋಪದಿಂದ
ತುಂಬಿವರಿ ಸಂಪಗೆಯುಲರ ಪರಿಮಳದ ಸೂರೆ ।
ಗಂ ಬಯಸಿ ಬಂದಮಿಡು ಮಿಗೆ ಪೊಸತೆನುತೆ ಗರಿಸಿ ।
ದಂ ವೇಗದಿಂ ಮಣಿವರೂಥಮಂ ಕೆಲಬಲದ ಮನ್ನೆಯರ ಗಡಣ
ದಿಂದೆ ॥೩೭॥

ಇವು ಭಗೀರಥರಥದ ಬೆಂಕೊಂಡು ಬರುವ ಸುರ ।
ನದಿಯು ಪ್ರವಾಹಮೆನಲಾ ನೃಪನ ಮರವರೂ ।
ಥದ ಪಿಂತೆ ಬಹುಪಾದ್ಯರಥಸಂದಣಿಯಿಪ್ಪತ್ತು ಚತುರಂಗದ ॥
ನದಹತಿಗೆ ಧರೆ ನಡುಗುತಿರೆ ಬಿಜಯಂಗೆಯ್ಸನಂ ।
ತದರ ಸಂಭ್ರಮಕೆ ಸೈರಿಸದಂತರಂಗದೊ ।
ಳ್ಮದಿಯುತಿರ್ದಂ ಕರ್ಣಸುತನವನ ಭಾವಮಂ ಪವನಜಾತಂ ಕಂಡನು ॥೩೮॥

ಕಟ್ಟಿ ತರುವಮೂಲಕಶ್ವಮನದರ ಕಾವಲ್ಗೆ।
ದಿಟ್ಟ ಹೈಡಿಂಬಿಯಂ ಬೈಚಿಟ್ಟು ತಮ್ಮನುರೆ।
ಯಟ್ಟೆ ಬಹ ಯೌವನಾಶ್ವನ ಪಡೆಗೆ ಕಾರ್ಣಿಯಂ ಕಳುಪಿ ಕಾಳಾಗ್ನಿಯಂತೆ॥
ಇಟ್ಟಣಿಸುತ್ತೈದುವ ಸುವೇಗನ ಬಲೌಘಕಿದಿ।
ರ್ಬಿಟ್ಟು ನಿಂದಂ ಭೀಮನುತ್ಸಾಹದಿಂದೆ ಪೆ।
ರ್ಬಿಟ್ಟೊತ್ತಿ ನೂಕುವ ಮಹಾವಾತಘಾತಮಂ ತಡೆದೊಳೆಯುವಸ್ತಂತಿರೆ॥೨೯॥

ಕೇಳ್ಮಹೀಪಾಲಕ ಸುವೇಗನ ಭಟಚರ್ಣಿ।
ಯೊಳ್ಮುತ್ತಿಕೊಂಡವೃಕೋದರನನಿತ್ತ ಕೆಂ।
ದೂಳ್ಮುಸುಕಲೆಣ್ದೆಸೆಗಳಂ ನೃಪರ ಮಣಿಭೂಷಣದ ಕಾಂತಿ ದ್ಯುಗಮ್ಸುಗಸಲು।
ತೋಳ್ಮಿಡುಕಿ ನಿಂದಾರ್ದು ಝಳಪಿಸುವ ಭಟರ ಕರ।
ವಾಳ್ಮಿಂಚೆ ಛತ್ರಚಮರಂಗಳ ವಿಡಾಯಿ ಮಿಗೆ।
ಸೂಳ್ಮೊರೆಯೆ ನಿಸ್ಸಾಳಕೋಟಿ ಕಲಿಯವೌವನಾಶ್ವಕ್ಷಿತಿಪನೈತಂದನು॥೩೦॥

ಒತ್ತಿ ಬಹ ಯೌವನಾಶ್ವನ ಪಡೆಯ ಚೂಣಿಯಂ
ಕಿತ್ತು ನಿಂದಂ ಕರ್ಣಸುತನದಂ ಕಂಡು ಕವಿ।
ದತ್ತವನ ಮೇಲೆ ಕರಿತುರಗರಥಪಾಯದಳವೊಂದಾಗಿ ಸಂದಣಿಯೊಳು।
ಹತ್ತಿಸಿದ ಚಾಪಮಂ ಜೇಗೈದು ಕೂಡೆ ಮಸೆ।
ವೆತ್ತ ಕೂರಂಬುಗಳನಾರ್ದಿಸಲ್ಸೇನೆ ಮುರಿ।
ದತ್ತವನ ಬಾಣಘಾತಿಗೆ ಹಯದ ಚೋರನೇಂ ವೀರನೋ ಜಗದೊಳೆ
ನುತೆ॥೩೧॥

ಎಲ್ಲಿ ಹಯಚೋರನಂ ತೋರವನ ನೆತ್ತರಂ।
ಚೆಲ್ಲುವೆಂ ಭೂತಗಣಕೆನುತೆ ಖತಿಯಿಂದೆ ಸಿಂ।
ದಲ್ಲಿ ನಿಲ್ಲದೆ ಬಪ್ಪ ಯೌವನಾಶ್ವನ ರಥಕೆ ವೃಷಕೇತು ಕರ್ಣಸೂನು।
ಬಿಲ್ಲೊಳಂಬಂ ಪೂಡಲಾರು ನೀನೆಲವೊ ನ।
ಮ್ಮಲ್ಲಿ ನೆಣಸಿದೆ ನೋಡಿದೊಡೆ ಬಾಲಕಂ ನಿನ್ನೊ।
ಳ್ಗೊಲ್ಲೆನಾಹವಕೆಮ್ಮ ಕುದುರೆಯಂ ಬಿಟ್ಟು ಪೋಗೆಂದೊಡವನಿಂತೆಂದನು॥೩೨॥

ಆರಾದೊಡೇನಶ್ವಮಂ ಬಿಡುವನಲ್ಲ ಮದ।
ವಾರಣಂ ಪಿರಿದಾದೊಡೆಳಸಿಂಗಮಂಜಿ ಕೆಲ।
ಸಾರುವುದೆ ನಿನ್ನ ತನುವಿನ ತೋರದಾಯತಕೆ ಕಲಿಗಳೆಂದು ಕಾತರಿಪುದೆ

ವೀರನಾಪೊಡೆ ಕೈದುಮುಟ್ಟಿಗಳ ಘೋರ ಪ್ರ ।
ಹಾರವಂ ತೋರಿಸೀ ಸ್ಥೂಲಸೂಕ್ಷ್ಮಂಗಳ ವಿ ।
ಚಾರಮೇಕೆಸುತೆ ವೃಷಕೇತು ತೆಗೆದೆಚ್ಚನಾ ನೃಪನ ಕಾಯಂ
ನೋಯಲು ॥೨೩

ಲೋಕಪೊತ್ತನ್ನೊಳ್ಕೊಣರ್ವ ಛಟರಿಲ್ಲ ನೀ ।
ನೇ ಕಲಿ ಕಣಾ ಪಸುಳೆಯೆಂದು ಸೈರಿಸಿಪೆ ನಿನ ।
ಗಾಕೆವಾಳಿಕೆಯ ಧೀರತ್ವಮುಂಟಾಪೊಡದು ಬಳಿಕೆಪ್ಪ ಸೃಣ್ಯಾಮೆನುತ ।
ಆಕರ್ಣಪೂರದಿಂ ಜೆಗೆಪೆಚ್ಚನಾ ಭೂಪ ।
ನೀ ಕರ್ಣಸಂಭವಂ ಕಡಿದನೆಪೆಯೊಸ್ಸರಳ ।
ನೇಕಾರ್ಣವಂ ಮೇರೆದಪ್ಪಿತೆನೆ ಮುಸುಕಿದಂ ಕ[illegible]ವನ ರಥ
ವನು ॥೨೪

ವಾಗಪೊ[illegible]ಗಣಂಗಳನರಿದು ಕರ್ಣಜಂ
ಕೂರ್ಗಣೆಯ [illegible]ಲವಂ ಸೃಜಿಸಲಾ ನೃಪನ ।
ತೇಗೆರಗಿ ಕೂರ್ಗೊಂಡು ಮುತ್ತಿತು [illegible]
[illegible]ಗಳಿಂಪೊ[illegible]ಸಿ [illegible] ಬ[illegible] ಕೆ ।
ನ್ನೀಗಾರಿ ದೀರ್ಘಶರಮನಂಗೆ[illegible] ಕುಮರಿಗ ।
ಕ್ಕೇಗೋಲ[illegible]ನೃಪನಂಗಪೊಳ್ಪೊಣಿಸಿದು[illegible] ॥೨೫

ಒಡಲೊ[illegible]ಡಿದಸ್ತ್ರವಂ ಕಿತ್ತೂಡಣೆ ಚಿತ್ತದೊ
[illegible]ಡುವ ಕಡುಗೋಪದಿ [illegible] ಸೂ[illegible] ।
[illegible]ಮೋ ಕಣ್ಣ[illegible] ಕೆಂಪಡರ್ದಾಲಿಗ[illegible]ವಾಗಲು
ತುಡುಕಿ [illegible] ತಿರುವಿನೊ ।
[illegible] ಕಿಪಿನರಗೆ ತೆಗೆದೆಚ್ಚೊಡವನೆಂದು ಕ್ಕೆ ।
ನಿಡಿದೆ ಕ[illegible] ॥೨೬

[illegible]ವಂ [illegible] ಗೆಲು
[illegible] ಕರ್ಣಜಂ [illegible] ।
[illegible] ಒಂಕ್ಕೈದವಂ [illegible]ಸ್ತ್ರವಂ [illegible]ಸಲ್ಕೆತನು ।
[illegible] ಪ್ಪೆಲಾಸ್ತ್ರವಂ [illegible] ।
[illegible]ಕುಲಿಶಾಸ್ತ್ರ [illegible] ।
[illegible]ದಸ್ತ್ರವಂ ತೆಗೆಯುತ್ತೆ ಗರುಡಾಸ್ತ್ರ[illegible] ॥೨೭

ಮೊತುರೇ ತರುಣ ಮಂತ್ರಾಸ್ತ್ರಪ್ರತೀಕಾರ ।
ಚಾತುರ್ಯಮುಂಟಲಾ ನಿನ್ನೊಳದು ಲೇಸು ಗೆ ।
ಲ್ವಾತುರಮದೇಕೆ ನಿನಗೆನುತವಂ ಕೈದೋರಿಸಲ್ಕಸೆಗಳಾಗಸಮೊಳು ॥
ಸೇತುಗಟ್ಟಿದ ಪೊಲಿಟ್ಟಣಿಸುತಿರಲಾಗ ವೃಷ ।
ಕೇತು ತರಿದೊಟ್ಟುತಿರಲವರಿರ್ವರೆಡೆಯೊಳ ।
ಡ್ಡಾತು ನಿಂದುದು ಜಿಳಿದು ಚಿನಕಡಿದ ಶರಗಿರಿಯುಮೇಸಂಚಿಸವೃತ
ವನು ॥೨೮

ಅವರಿರ್ವರಿಸುಗೆಯೊಳ್ಮಂಡಲಾಕೃತಿಯೊಳೊ ।
ಪ್ಪುವ ಕಾರ್ಮುಕಂಗಳುದಯಾಸ್ತಮಯಮಪ್ಪ ಶಶಿ ।
ರವಿಬಿಂಬದಾಯತಮೊಲಿರೆ ನಡುವಣಂಬುಗಳ್ತನ್ಮರೀಚಿಗಳಂತಿರೆ ॥
ಅವಯವದ ಗಾಯದೊಳುಗುವ ರಕ್ತಧಾರೆಗ ।
ಳ್ತವೆ ಸಂಜೆಗೆಂಪಿಡಿದ ತೆರದಿಂದೆ ಕಂಗೊಳಿಸೆ ।
ಭುವನದೊಳ್ಪೊಸತಾಯ್ತು ಸಂಗರಂ ಸಂಧ್ಯಾಗಮವೆನಂದು ಸೂಚಿ
ಸಂತೆ ॥೨೯

ಎಚ್ಚು ಕೈಗೆಡದಾ ನೃಪಾಲನಾ ಕಣೆಗಳಂ ।
ಕೊಚ್ಚಿ ಬೇಸರನೀ ವೃಷಧ್ವಜಂ ಬಳಿಕದಕೆ ।
ಮೆಚ್ಚಿ ಕೇಳ್ದಂ ಯೌವನಾಶ್ವನೆಲೆ ಬಾಲ ನೀಂ ಪಸುಳೆಯಾಗಿರ್ದಡೇನು ॥
ಕೆಚ್ಚೆದೆಯ ಭಟನಪ್ಪೆ ನಿನ್ನ ಪಡೆದವನಾವ ।
ನೆಚ್ಚರಿಸು ನಿಮ್ಮ ಮುತ್ತಯ್ಯನಾರೆನುತೆ ತೆಗೆ ।
ದೆಚ್ಚೊಡಾತನ ಕೋಲ್ಗಳಂ ಕಡಿದು ನಸುನಗುತೆ ಕರ್ಣಸುತನಿಂತೆಂ

ಪುಯ್ಯಲೊಳ್ಗೊಂಡಳವುದೋರುತಿರ್ದಾಗ ಸಿ ।
ಮ್ಮಯ್ಯ ಮುತ್ತಯ್ಯನಾರೆಂದು ತನ್ನಂ ಕೇಳ್ದೆ ।
ಕಯ್ಯರಿದು ಕಾಣಬೇಡವೆ ಕರ್ಣಕವುಲಹಿತಕರವವನು[illegible] ॥
ಪುಯ್ಯಲೆಳಿಸಿದ ವಿರೋಧಿಯ ಕಿವಿಗೆ ವಿವಹಿತಂ ।
ಗೆಯ್ಯಬೇಕಲ್ಲದೆಲೆ ಮರುಳೆ ಕೋವಿದನಾದೊ ।
ಡೊಯ್ಯನೆ ಪರೋಕ್ಷದೊಳ್ತಿಳಿದುಕೊಳ್ವಾಸಕೆನುತೆ ವೃಷಕೇತು ತೆಗೆದೆ
ಚ್ಚನು ॥[illegible]

ಅಪ್ರತಿಮನಪ್ಪೆ ಬಾಲಕ ಲೇಸು ಲೇಸು ಬಾ।
ಣಪ್ರಯೋಗಂಗಳೆನುತೊಂದು ಕಣೆವೂಡಿ ಕ।
ರ್ಣಪ್ರದೇಶಕೆ ತೆಗೆದವಂ ಬಿಡಲ್ಕಿವನುರವನುಗಿಯೆ ಪೈಮರೆದು ಕೂಡೆ।
ಸಪ್ರಾಣಿಸುತೆ ಕೆರಳ್ದಿನ್ನು ನೋಡೀ ಸಾಯ।
ಕಪ್ರಭಾವವನೆನುತೆ ಪೆಸೆವೆಸೆಗುಗುಳ್ದ ಕನ।
ಕಪ್ರಭೆಯೊಳೆಸೆವ ಸರಳಂ ತೊಟ್ಟು ಕೆನ್ನೆಗೆಳೆದಾರ್ದೆಚ್ಚನಾ ಸೃಸನನು ॥೪೩॥

ಏನೆಂಬೆನರಸ ಕರ್ಣಜನ ಬಾಣದ ಘಾತ।
ಕಾ ನರೇಂದ್ರಂ ಕರದ ಚಾಪಮಂ ಬಿಟ್ಟು ಮೂ।
ರ್ಛಾನುಗತನಾಗಲಾತನ ಬಲಂ ಮುಂಕೊಂಡು ಬಂದಿವನ ಮೇಲೆ ಕವಿದು॥
ಆನೆಯಂ ಪೊಯ್ದುಳಿವ ಸಿಂಗಮಂ ಮುತ್ತುವ ಮೃ।
ಗಾನೀಕಮಂ ಕಂಡೆಬಂದೆನುತೆ ತ ಳುಕಿದನ।
ನೂನ ಶರಜಾಲಮಂ ಕರಿತುರಗರಥಪದಾತಿಗಳ ಸಂದಣಿ ಮಣಿಯಲು ॥೪೪॥

ತರಿತರಿದು ಕತ್ತರಿಸಿ ಚುಚ್ಚಿ ನಟ್ಟುಚ್ಚಳಿಸಿ।
ಕೊರೆದಪರಿದು ಕಡಿದಿರಿದು ಬಗಿದುಗಿದು ಗಬ್ಬರಿಸಿ।
ಪರಿದು ಸೀಳ್ದುತ್ತರಿಸಿ ಕೆತ್ತಿ ಖಂಡಿಸಿ ಬಳಸಿ ತಿವಿದಿಕ್ಕಿ ಕೊಯ್ದು ಪೊಯ್ದು॥
ಎರಗಿ ಕವಿದಿಡಿದೊತ್ತಿ ಕದುಕಿ ಕೀಲಿಸಿ ಕೀರಿ।
ತುರುಗಿ ತುಂಡಿಸಿ ತುಳುಕಿ ನಾಟಿ ಮದುಮೊನೆಗೊಂಡು।
ನೆರೆ ಪೊರಳ್ದುವರಿ ಚತುರ್ಬಲವನೆಲ್ಲಮಂ ಕರ್ಣಜನಿಸುವ ಕಣೆಗಳು॥೪೫॥

ತಲೆ ಬೀಳಲೊಟ್ಟಿಗಳ್ಕಾದುವವು ಮೋಣಷ್ಟು।
ನೆಲಕುರುಳೆ ತಲೆಗಳೆಬ್ಬಾಡುವುವು ಕೈದುಗಳ।
ನಲುಗಿದುವು ಖಂಡಿಸಿದ ತೋಳ್ಗಳಾರೆ ಕಡಿದ ಕಾಲ್ಗಳುಂ ಪಕಡಿಯಿಟ್ಟುವು॥
ಕಲಿತನಮುಮೆಂತೊ ಭಟಭಟರಳವಿಗೊಟ್ಟಾಗಿ।
ಸಲೆ ಸರಳ ಸಾರದಿಂ ಮಡಿಯುತಿರ್ದರು ನಮು।
ಜ್ವಲದೀಪದೆಡೆಗೆ ಮುಗ್ಗುವ ಪತಂಗಪ್ರಸರಮೆನೆ ವೃಷಧ್ವಜನಿದಿ
ರೊಳು ॥೪೬॥

ಕಡಿಕಡಿದು ಬಿದ್ದ ಕೈಕಾಲ್ಗಳಿಂ ತೋಳ್ಗಳಿಂ।
ಸ್ಕಂದೆಗೆಡೆದ ಪೇರೊಡಲ ಸೀಳ್ಗಳಿಂ ಪೋಳ್ಗಳಿಂ।
ಮುಡಿಮುಡಿದುರುಳ್ದ ಕಟ್ಟಾಸ್ಯಗಳಿಂ ಬಾಸ್ಗಳಿಂದೊಡೆದ ತಲೆವೋಳ್ಗಳಿಂದೆ।

ಕಡು ಭಯಂಕರವಾಗಲಾರಣದ ಮಾರಣದ ।
ನಡುವೆ ಕಲ್ಪಾಂತಭೈರವನಂತೆ ಜವನಂತೆ ।
ಕಡು ಮುಳಿದವನ ಕಾಣುತವೆ ಬಿಟ್ಟು ಸಲೆ ಕೆಟ್ಟು ಸರಿದರೆಣ್ದೆಸೆಗೆ
ಭಟರು ॥೪೬॥

ವೈಮರೆದ ಭೂಪನಂ ಬಿಟ್ಟು ಪಟುಭಟರುಳಿಪಿ ।
ವೈ ಮಹಾವೇವೆನುತೆ ಸರಿದರೆಣ್ದೆಸೆಗಿವಂ ।
ಕೈಮಾಡಲೊರ್ವರಂ ಕಾಣದೆ ಬಳಲ್ದು ರಿಪು ಚೇತರಿಸಿಕೊಳ್ಳದಿರಲು ॥
ವೈಮನಸ್ಯದೊಳಕಟ ತಪ್ಪಿತೆ ರಣಾಟೋಪ ।
ವೈಮೊಗಂ ಬಲ್ಲನೆನುತವನೆಡೆಗೆ ಬಂದಿದೇ ।
ವೈ ಮೂರ್ಖ ನಿನಗೆ ನಲ್ನುಡಿಯುದಿರಲೊಯ್ಯನಾ ನೃಪನುಸಿರನಾರೈ
ದನು ॥೪೭॥

ಸತ್ಯಮೆನಗುಂಟಾದೊಡಾಂ ಧೀರನಾದೊಡಾ ।
ದಿತ್ಯಂಗೆ ಪೌತ್ರನಾದೊಡೆ ತನ್ನ ತಾತಂಗ ।
ಪತ್ಯ ನಾನಾದೊಡೀ ನೃಪತಿ ಜೀವಿಸಲೆನುತ್ತೆ ಕರ್ಣಜಂ ಸಗೆ ಪಾದಪ ।
ಕೃತ್ಯಮಂ ಬಿಟ್ಟಾ ಮಹೀಶನ ಬಳಿಕ್ಕೆಗಾ ।
ಚಿತ್ಯಮಾದುಪಚಾರದಿಂದೆ ಸಮರಶ್ರಮ ಪ ।
ರಿತ್ಯಾಗಮಪ್ಪಂತೆ ಸಂತೈಸುತಿರಲಾ ಧರಾಧಿಪಂ ವೈಮುರಿದನು ॥೪೮॥

ಅರಸ ಕೇಳಾ ಯೌವನಾಶ್ವನಿಂತಾಗ ವೈ ।
ಮುರಿದು ಕಣ್ದೆರೆವನಿತರೊಳಗಾತನರಿಯುದಂ ।
ತಿರೆ ಕರ್ಣಸಂಭವಂ ಮುನ್ನ ತಾನಿರ್ದ ಪ್ರದೇಶಕ್ಕೈತಂದು ನಿಂದು ॥
ಕರದ ಕಾರ್ಮುಕವನೊದರಿಸಿ ದಿವ್ಯ ಬಾಣಮಂ ।
ತಿರುಪುತಾರ್ದಿಸುವ ತೆರದಿಂ ಬರಿದೆ ಮುಳಿಸಿನು ।
ಬ್ಬರಮಂ ನೆಗಳ್ಚಿ ತನ್ನಾಳ್ತನದ ಬಿಂಕಮಂ ಕಾಣಿಸಿದನೇವೇಕ್ಷನು ॥೪೯॥

ಕೂಡೆ ಕಣ್ದೆರೆದೆದ್ದು ಚೇತರಿಸಿ ದೆಸೆಗಳಂ ।
ನೋಡಿ ತನ್ನವರೊರ್ವರಂ ಕಾಣದಿದಿರೆ ಕೈ ।
ಮಾಡದೆ ವೃಥಾಟೋಪಮಂ ನೆಗಳ್ಚುವ ವಿರೋಧಿಯ ವಿಕ್ರಮಾಪನ ಕಂಡು ।
ಮೂಡಿದ ವಿರಕ್ತಿಯಿಂ ನಾಚಿ ಮನಮೊಳ್ಪಂತ ।
ಪಾಡಿವನೊಳಿನ್ನು ಸಲ್ಲದು ತನಗೆ ಕಾರುಣ್ಯ ।
ಕೇಡಾದ ಬಳಿಕದೇತಕೆ ಸಮರವೆನುತವಂ ಕರ್ಣಜಂಗಿಂತೆಂದನು ॥೫೦॥

ಮೂಲೋಕದೊಳ್ತನಗೆ ಸಮರಾದ ಮೇದಿನೀ ।
ಪಾಲರಂ ಸುಭಟರಂ ಕಾಣೆನೆಂದಾನಿನಿತು ।
ಕಾಲಮುಂ ಬೆರೆತಿರ್ದೆನೆನ್ನುವಂ ಗೆಲ್ದು ನೀನತಿಬಲನೆನಿಸಿಕೊಂಡೆಲಾ ॥
ಬಾಲ ನೀನಾರವಂ ನಿನ್ನ ಪೆಸರೇನಿಳೆಗೆ ।
ಮೇಲೆನಿಸುವೀ ಹಯಂ ನಿನಗದೇತಕೆ ನಿನ್ನ ।
ಶೀಲಕಂ ಮಾರುವೋದಂ ಕಾದಲೊಲ್ಲೆನಿನ್ನುಸಿರೆಂದೊಡಿಂತೆಂದನು ॥೫೧॥

ಆದೊಡೀ ಜಗಕೆ ಲೋಚನನೆನಿಸಿ ನಭದೊಳೆಸೆ ।
ವಾದಿತ್ಯನಿಂದೊಗೆದ ಕರ್ಣನಂ ಕೇಳ್ದರಿತೆ ।
ಯಾದೊಡಾತನ ಸುತಂ ಪೆಸರೆನಗೆ ವೃಷಕೇತುವೆಂದು ನರಲೀಲೆಗಾಗಿ ।
ಯಾದವರ್ಗರಸಾದ ಕೃಷ್ಣಂ ಭರತಕುಲದ ।
ಮೇದಿನೀಶ್ವರ ಯುಧಿಷ್ಠಿರನಂ ಮುಖಂಗೈಸ ।
ಲೀ ದಿವ್ಯಹಯಕೆ ಭೀಮನನಟ್ಟಿಲವನೊಡನೆ ಬಂದೆನಿದು ಹದನೆಂದನು ।೫೨।

ಎಂದೊಡಚೆ ಕುವರ ನೀನಿನ್ನಿಗಂ ತನ್ನೊಳಂ ।
ತೆಂದುದಿಲ್ಲಕಟ ಧರ್ಮದ ರೂಪು ತಾನೀತ ।
ನೆಂದೆಂಬರಾ ಯುಧಿಷ್ಠಿರಮಹೀಪತಿಯನವನಿಂ ಮುಖಂಗೈಸಿದಪನೆ ॥
ಇಂದಿರಾವಲ್ಲಭನ ಪದಕೆ ನವಿಸ್ತ್ರೀ ಹಯವ ।
ನೊಂದನೊಪ್ಪಿಸಿ ತನ್ನ ಸರ್ವಸ್ವಮಂ ತಾನೆ ।
ತಂದು ಹರಿಪದಕರ್ಪಿಸುವೆನೆಲ್ಲಿ ಭೀಮನಂ ತೋರೆಂದನಾ ಭೂಪನು ॥೫೩॥

ಎನಲಚ್ಯುತನ ಪದಕೆ ಸರ್ವಸ್ವಮೊಪ್ಪಿಸುವ ।
ಮನಮುಳ್ಳನಾವನಾತಂಗೆ ಪಾಂಡವರೊಳಿರ ।
ವಸಿತಿಲ್ಲಿವಾ ಪಾರ್ಥಿವರ ಸಖ್ಯಮಾವಂಗೆ ದೊರೆವುದಾತಂಗೆ ಹರಿಯು ॥
ವುಸಿಕಿಕ್ಕುವುದಿಂದೆ ಭೀಮನಂ ಕಾಣ್ಬುದೀ ।
ಗಮನಯಂ ನಿಂಗೆಂದು ಕರ್ಣಜಂ ನುಡಿದೊಡಾ ।
ಜನಪನುತ್ಸವದೊಳಿವಡಿಸಿದಂ ತನ್ನ ಮಣಿರಥವನಿರ್ವರುಮೈದಲು ॥೫೪॥

ವನನಪಾಧೀಶ ಕೇಳ್ವಳಿಕ ವೃಷಕೇತು ಸು ।
ವ್ಯಾಸದಿಂದಾ ಯೌವನಾಶ್ವಭೂಪತಿಗೆ ಹವ ।
ಮಾನಸುತನಂ ಕಾಣಿಸುವೆನೆಂಬ ತವಕದಿಂದಾತನ ವರೂಥದೊಳಗೆ ॥

ಮಾನದಿಂದಡರ್ದವಂಪೆರಸಿ ನಡೆತರುತಿರೆ ವಿ।
ಮಾನದಿಂ ನೋಡುವನಿಮಿಷನಿಕರಮೀತನ ಸ।
ಮಾನದವರಿಲ್ಲೆಂಪು ಕೊಂಡಾಡುತಾಗಸದೊಳರಲ ಸರಿಯಂ ಕರೆದರು ॥೫೫॥

ಅನ್ನೆಗಂ ಭದ್ರಾವತೀಶ್ವರನ ಸುತನ ಸೈ।
ನ್ಯನ್ನಡೆದು ಬಂದಾ ವೃಕೋದರನ ಮುತ್ತಿದೊಡ।
ವನ್ನಿಜ ಗದಾದಂಡಮಂ ಕೊಂಡು ದಿಂಡುಗೆಡಹಿದೊಡಾ ನೃಪಾಲಸೂನು।
ತನ್ನ ಸಾಹಸದೊಳನಿಲಜನ ಕೋಪಾಟೋಪ।
ಮನ್ನಿಲಿಸಿ ಕಾದುತಿರಲಾ ಸಮಯಕಿವರೊಂದೆ।
ರನ್ನದೇರೊಳಗಿರ್ವರುಂ ಬರುತಿರಲ್ಕಂಡು ಜಿರಗಾದರವರತ್ತಲು ॥೫೬॥

ಪವಮಾನನಂದನಸುವೇಗರನ್ಯೋನ್ಯಮಾ।
ಹವದ ಜೇಳಂಬಮಂ ಮರೆದೊಂದೆ ದೊಂದೇರೊ।
ಳವರಿರ್ವರುಂ ಬರಲ್ಕಂಡು ವಿಸ್ಮಿತರಾಗಿ ನಿಂದರನಿತರೊಳತ್ತಲು।
ರವಿಸುತನ ಸೂನು ಕಲಿ ಯೌವನಾಶ್ವಂಗೆ ಪಾಂ।
ಡವರಾಯನನುಜನಂ ತೋರಿಸಿದೊಡಾ ವರೂ।
ಥವನಿಳಿದು ನಡೆಯುತಾ ಭೂವರಂ ತನ್ನ ತನುಸಂಭವಂಗಿಂತೆಂದನು ॥೫೭॥

ತನಯ ದಿವ್ಯಾಶ್ವಮಂ ಪಿಡಿವರಿವರೆಂಬ ಮನ।
ದನುತಾಪಮಂ ಬಿಡು ಸರೋಜಾಂಬಕಂ ಪಾಂಡು।
ಜನಪನಂದನಯುಧಿಷ್ಠಿರನರೇಶ್ವರನ ಮುಖಕೆಂದು ಸವಿಸ್ತ್ರೀ ಕಟಾಕ್ಷಗೆ।
ಅನಿಲಸುತನಂ ಕಳುಹಿದೊಡೆ ಬಂದನಾತಂಗೆ।
ವಿನಯದಿಂದೆಮ್ಮ ಸರ್ವಸ್ವಮಂ ಕುಡುವೆವಿ।
ನ್ನನುವರವದೇಕೆ ನಿಲ್ಲಿಸಲವಂ ಶರಧನುವನಿರಿಸಿ ಪಿತನಂ ಸಾರ್ದನು ॥೫೮॥

ಬಳಿಕ ತನುಜಾತನಂ ಕೂಡಿಕೊಂಡಾ ನೃಪಂ
ನಳಿನಸಖಸುತನ ಮಗನೊಡನೆ ಬಂದನಿಲಜನ
ಬಳಿಸಾರ್ದು ಕಾಲ್ಗೆರಗಲವನೀ ವೃಷಧ್ವಜನ ಪೊಗಸೋಡುತಿಪ್ಪಾರಿಸಿ
ಎಳನಗೆಯೊಳಾತನಿವನೀಗಳೀ ಮೇದಿನೀ।
ತಳಕರಸೆನಿಪ ಯೌವನಾಶ್ವನೀತಂಗೆ ಮೈ।
ನೆಳಲೆನಿಪ ಕುವರಂ ಸುವೇಗನೆಂಬವನೀತನೆನುತೆ ಮಣಿದಂ ಪವ

ಮಾನಜಂ ॥೫೯॥

ಇವರಚ್ಯುತಾಂಘ್ರಿದರ್ಶನಲಂಪಟತ್ವದಿಂ ।
ದವನಿಪತಿಕುಲಶಿರೋಮಣಿಯೆನಿಪ ಧರ್ಮಜಂ ।
ಭವನಡಿಯನೋಲೈಸಲೆಂದು ನಿನ್ನಂ ಕಾಣಲೋಸುಗಂ ಬಂದರೆಂದು ॥
ಪವನಜಂಗಾ ವೃಷಧ್ವಜನೊರೆದೊಡಾತನು ॥
ತ್ಸವದೊಳಾ ಭೂಪಾಲನಂ ತೆಗೆದು ತಕ್ಕೈಸು ।
ತವನ ತನುಜಾತನಂ ಬಿಗಿಯಪ್ಪಲಾ ನೃಪಂ ಬಕವೈರಿಗಿಂತೆಂದನು ॥೬೦॥

ಎಲೆ ವೃಕೋದರ ಬಾಹುಬಲಮುಳ್ಳ ವೀರರುಂ ।
ಪಲಬರುಂಟಿಳೆಯೊಳವರಂ ಕಂಡು ಬಲ್ಲೆನಾಂ ।
ಕಲಹದೊಳ್ಮಲೆತವಂ ಮೈಮುರಿದೊಡಿರಿವರಲ್ಲದೆ ಪಗೆಯು ಪೊರೆಗೆ ಬಂದು ॥
ಅಲಸಿದನಿಪಂ ಧುರದೊಳೆಂದವನನುಪಚರಿಸಿ ।
ಸಲಹಿದ ಪರಾಕ್ರಮಿಗಳಾರ್ಮಹೀತಳದೊಳೀ ।
ಕಲಿವೃಷಧ್ವಜನಲ್ಲದಸುರ-ದಾನವ-ಮಾನವರೊಳೊಗೆದ ಪಟುಭಟ
ರೊಳು ॥೬೧॥

ಆವನ ವಿನೋದಮಾತ್ರದೊಳೀ ಸಮಸ್ತಭುವ ।
ನಾವಳಿಗಳಾಗಿ ಬಾಳ್ದಳಿವುವಾ ವಿಭು ನಿಮ್ಮ ।
ಸೇವೆಯಾಳ್ಗಡ ನಾನದೇಸರವನೆಂದೆನ್ನ ಮೇಲೆ ಸಾಹಸವನೆಸಗಿ ॥
ಈ ವಾಜಿಯಂ ಪಿಡಿದಿರಕಟ ತಪ್ಪಿದಿರಿ ಲ ।
ಕ್ಷ್ಮೀವರನ ಕಿಂಕರರ್ಗೀಯುವನೆ ತಾನೆನ್ನ ।
ಜೀವಮುಂ ಸಮರದೊಳ್ಪಾಮುಳಿಪಿಪಂ ಕರ್ಣತನಯನವನೇಪೇಳ್ವೆನು ॥೬೨॥

ಈ ವೃಷಧ್ವಜನಿಂದು ಸಮರದೊಳ್ಕಾಯದೊಡೆ ।
ಯಾ ವೃಥಾಕೃತವಾಗಿ ಪೋಗುತಿರ್ದುದು ಜನ್ಮ ।
ಮಾವೃತಸಮಸ್ತಯಾದವನಾಗಿ ನಿಮ್ಮೊಳಗೆ ನರಲೀಲೆಯುಂ ನಟಿಸುವ ॥
ಶ್ರೀವತ್ಸಕುಚಕುಂಕುಮಾಂಕನಂ ಕಂಡಪೆನ ।
ಲಾ ವೃಕೋದರ ನೀವು ಮಾಡಿದುಪಕಾರಕಟ ।
ಲಾವೃಂದಸಹಿತ ಬಂದೆನ್ನ ಸರ್ವಸ್ವಮುಂ ಹರಿಗರ್ಪಿಸುವೆನೆಂದನು ॥೬೩॥

ಎಂದೊಡರಸಂಗೆ ಸೋದರರಾವು ನಾಲ್ವರುಂ ।
ಬಂದುದರಗಿನ್ನು ನೀಂ ಸಹಿತೈತರಾವೆಸಿಪ ।
ರಿಂದೆ ಹರಿದರ್ಶನಮಸಾಧ್ಯಮಪ್ಪುದೆ ನಿನಗೆ ಧರ್ಮಜನ ಪರಮಾಪ್ತನು ॥

ನಿಂಪು ಮಾಡಿಸುವ ಭಾರಕನಸುರಹರನಾ ಮು ।
ಕುಂದನಂ ಕಾಣ್ಬುದುಃಕ್ಕೊಡೆ ತನ್ನ ಕೂಡೆ ನೀಂ ।
ಬಂದು ನೇವಿಪುದೆನಲ್ಮಾರುತಿಗೆ ವಿನಯದಿಂದಾ ಭೂಪನಿಂತೆಂದನು ॥೬೪॥

ಅಹುದು ನೀನೆಂದುದಂ ಮೀರೆನೆನ್ನೂರ್ವುಗದ ।
ಬಹಿರಂಗದಿಂ ತೆರಳ್ವುದು ನೀತಿಯಲ್ಲೆನ್ನೊ ।
ಳಹ ನೇವೆಯುಂ ಪುರದೊಳೊಂದೆರಡುದಿವಸಂಗಳಿರ್ದು ಕೈಕೊಂಡ ಬಳಿಕ ॥
ಬಹುವಸ್ತುಚಯಸಹಿತ ಪಡೆವೆರಸಿ ನಿನ್ನೊಡನೆ ।
ಬಹೆನೆನ್ನನೊಡಗೊಂಡು ಮುದದಿ ಪೋಪಂತನು ।
ಗ್ರಹಿಸೆಂದವಂ ಬೇಡಿಕೊಳಲೊಪ್ಪಿದಂ ಕೀಚಕಾಂತಕಂ ಸಂತಸದೊಳು ॥೬೫॥

ತರಿಸಿ ಕೋಳ್ವಿಡಿದ ಹಯಮುಂ ಸುವೇಗನ ವಶದೊ ।
ಳಿರಿಸಿ ಬಳಿಕನಿಲಜಂ ಹೈಡಿಂಬಿಕರ್ಣಜ ।
ರ್ವೆರಸಿ ಭದ್ರಾವತಿಗೆ ಬರಲಾ ನೃಪಂ ಪೊಳಲ ಸಿಂಗರಿಸಿ ಮೇಣವರನು ॥
ಅರಸಿಯರ ಗಡಣದೊಳಿದಿರ್ಗೊಂಡು ಮನೆಯೊಳಾ ।
ದರಿಸಿ ದಿವಸತ್ರಯಂ ತಡೆದೊಡನೆ ಮಂತ್ರಿಯುಂ ।
ಕರೆಸಿ ರಾಜ್ಯದ ಭಾರಮಂ ಪೊರಿಸಿ ಹಸ್ತಿನಾಪುರಕ್ಕೈದಲನುವಾದನು ॥೬೬॥

ಶೀವಿರ್ದ ನಿಖಿಳ ಭಂಡಾರಮಂ ತೆಗಿಸಿ ನಾ ।
ನಾವಸ್ತುನಿಚಯಮಂ ಪೇರಿಸಿ ಸಮಸ್ತ ಸೇ ।
ನಾವಿತತಿಸಹಿತಾ ಹಯಂ ಸಹಿತ ಸುತ-ಸಹೋದರ-ಬಂಧುವರ್ಗ-ಸಹಿತ ॥
ಆ ವಸುಮತೀವಲ್ಲಭಂ ಪ್ರಭಾವತಿಯೆಂಬ ।
ದೇವಿ ಸಹಿತಗಣಿತವಧೂಜಾಲ ಸಹಿತ ಭ ।
ದ್ರಾವತಿಯ ಪುರಜನಂ ಸಹಿತ ಪೊರಮಟ್ಟನೊಲವಿಂ ಭೀಮಸೇನನೊಡನೆ ॥೬೭॥

ಎಲ್ಲರುಂ ಪೊರಮಟ್ಟ ಬಳಿಕಾ ನೃಪಂ ರಮಾ ।
ವಲ್ಲಭನ ದರ್ಶನಕೆ ಮಾತೆಯುಂ ಕರೆಯಲವ ।
ಳೊಲ್ಲೆನಾನಿಲ್ಲಿರದೊಡೀ ಬದುಕ ನೋಡುವವರಾರೆಂದು ಚಂಡಿಗೊಳಲು ॥
ಫುಲ್ಲನಾಭಂಗೆ ಸರ್ವಸ್ವಮೊಪ್ಪಿಸುವೊಡಿವ ।
ಳಿಲ್ಲದಿರಬಾರದೆಂದಾಕೆಯುಂ ಬಲ್ಪಿನಿಂ ।
ನಿಲ್ಲದಂದಳವನೇರಿಸಿ ಮತ್ತೆ ಮಾರುತಿಯೊಡನೆ ಪಯಣಕನುವಾದನು ॥೬೮॥

ಪಟ್ಟಣದೊಳಾರುಮಿಲ್ಲೆನಿಸಿ ತನ್ನೊಡನೆ ಪೊರ |
ಮಟ್ಟುವವಿಳ ಪ್ರಜೆಗಳವರ ನಡೆಸಲ್ ದಿನಂ |
ತಟ್ಟಿದಲ್ಲದೆ ಪೂಣ್ದಡಸ್ಸಿಗಂ ಧರ್ಮಜಂಗೀ ರಾಜ್ಯಕಾರ್ಯದನುವ ||
ಮುಟ್ಟಿಸದಿರಲ್ಕಾರದೆಂದಾ ಮಹೀಶ್ವರನ |
ಬಟ್ಟಗಾಪಿಕ್ಕಿ ಕರ್ಣಜ ಮೇಘನಾದರಂ |
ಕೊಟ್ಟು ನಿಂದಲ್ಲಿ ನಿಲ್ಲದೆ ಬಂದು ಭೀಮಸೇನಂ ಪೊಕ್ಕನಿಭಪುರಿಯನು ||೧೯||

ಸುತಪಸಂತಾಗಮಾಪನಿಷ್ಟ್ರಿಜ ಮಲಯಮಾ |
ರುತನುಪವನಸ್ಥಳದ ಸುಳಿವಂತೆ ಪವನಜಂ |
ಕ್ಷಿತಿಪನಾಸ್ಥಾನಮಂ ಪೊಕ್ಕರಸನಂ ಕಂಡು ಪಾದಪಲ್ಲವಕೆರಗಲು ||
ಅತಿಶಯಪ್ರೀತಿಯಿಂ ತೆಗೆದು ಬಿಗಿಯಪ್ಪಿ ರಾಜ |
ಸುತಜನ್ಯವಿದಂ ಬಗೆಯಲ್ಲಿ ಸೀ ಪೋದ ನಂ |
ಗತಿಯುಮೆಂತೈ ನಿನ್ನ ಭಾಷೆಗಳಿಲ್ಲವಾ ತುರಗಮೇಧಯಜ್ಞವೆಂದನು ||೨೦||

ಎನಲಿವನಿಪತಿಗೆ ಬಿನ್ನೈಸಿದಂ ಪವಮಾನ |
ತನಯನಕ್ಷಿಂದೆ ಭದ್ರಾವತಿಗೆ ನಡೆದುದಂ |
ಅನುತ ಹಯರತ್ನಮಂ ಪಿಡಿದುದಂ ಮುಂಕೊಂಡು ಸೇನೆಯಂ ನಡೆಬ
ತ್ತಿದುದ |
ಅನುವರದೊಳಹಿತನಂ ಜಯಿಸಿದಂ ಬಳಿಕವಂ |
ತನಗೆರಗಿ ನುಡಿದುದಂ ತನ್ನ ಸರ್ವಸ್ವಮಂ |
ಮನುಜಾಧಿಪಂಗೆ ಕೊಟ್ಟುದುಮಂ ನೃಪಂ ಕರ್ಣಜನೊಡನೆ ಬಂದುದನು ||೨೧||

ಕೇಳ್ದು ನೃಪನುತ್ಸವದೊಳನುಜನಂ ತಕ್ಕೈಸಿ |
ಬಾಳ್ಕೆಗೊಳಲಿರ್ದಿರ್ದ ತಂಡದಾರತಿಗಳಿಂ |
ನಾಳೆ ಸಡಗರದೊಳೆದುರ್ಗೊಂಡು ಬಂದು ಸಾಂಜಾಧಿಪಂಗೆ ಸಂಗತಿಯುಮ ||
ಪೇಳ್ವ ಮುದದೊಳಿನ ಸುರಪತಿಕೆ ದಿವಸಂ ನಿಜ |
ಭಾವದಿಂ ಚರಣಕೆರಗಿ ತವನಿಯ ಪಿಡಿದು |
ಪೇಳ್ಗೆಯೊಳ್ ನಿಂದಿರ್ದ್ದ ಮಾಂಸಿದನಾತನಂ ದಿವಸ್ಪತಿಲಕ್ಷ್ಮೀಶನು ||೨೨||

ಚೆನ್ನಬಸವ ಪುರಾಣ.

ನಾಲ್ಕನೆಯ ಕಾಂಡ

ಒಂದನೆಯ ಸಂಧಿ.

ವಿರೂಪಾಕ್ಷ ಪಂಡಿತ.

ಈತನು ವೀರಶೈವ ಕವಿಯು. ಇವನು ವಿಜಯನಗರದ ಹಿರಿಯ ಮಠದ ಪಟ್ಟಾಧಿಕಾರಿಯಾಗಿದ್ದನೆಂದು ತಿಳಿಯುತ್ತದೆ. ವೀರಶೈವ ಗುರುಗಳಲ್ಲಿ ಸುಪ್ರಸಿದ್ಧನಾದ ಮಳೆಯ ಮಲ್ಲೇಶನ ಸಂಪ್ರದಾಯಕ್ಕೆ ಸೇರಿದವನು. ಇವನ ಗುರುವು ಸಿದ್ಧವೀರೇಶನು. ಶ್ರೀ ವಿರೂಪಾಕ್ಷನೇ ಈತನ ಇಷ್ಟದೇವತೆಯು. ಈ ಗ್ರಂಥವು ಕಿ. ಶ. ೧೫೮೪ ರಲ್ಲಿ ಮುಗಿದಂತೆ ಕವಿಯು ಇದರಲ್ಲಿಯೇ ಹೇಳಿರುವನು.

ಈ ಗ್ರಂಥವಲ್ಲಿ ಪ್ರಸಿದ್ಧವಾದ ಭಾಗವು ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆಯವರು ಪ್ರಕಾಶ ಪಡಿಸಿದ ಚೆನ್ನಬಸವ ಪುರಾಣದ ಗ್ರಂಥವನ್ನೇ ಅನುಸರಿಸಿದೆ. ಈ ಸಂಸ್ಥೆಯವರು ೧೩ ಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಶುದ್ಧಪಡಿಸಿ ಅಚ್ಚು ಹಾಕಿಸಿರುವರು.

ಚೆನ್ನಬಸವ ಪುರಾಣ.

ನಾಲ್ಕನೆಯ ಕಾಂಡ.

ಒಂದನೆಯ ಸಂಧಿ.

ತಾರಕಾತ್ಮಜರಲೆಗೆ ಕಣ್ಗೆಟ್ಟು ಸುರರಿರದೆ ।
ಪೂರ್ವಾರಿಗತುಳ ಪಶುಪತಿ ಪಟ್ಟವುಂ ಕಟ್ಟಿ ।
ಕ್ರೂರ ಖಳರಂ ಕೊಲ್ವೆನೆಂದೀಶ್ವರಂ ತ್ರಿಪುರಕ್ಕೈದಿ
ಪಾಳೆಯವಿಳಿದನು ॥

ಶ್ರೀಮದಘನಕರ ಕಾಮಹರ ಪರಮಸುರನಮಿ ।
ಧರ ಕೃಪಾಕರ ದಿವಾಕರಕೋಟಿವರತೇಜ ।
ಪರಮಪುರುಷತರಸ್ತ್ರಿದಶವರವರದ ಹರ ಮಹೇಶ್ವರ ಮರುಳಖಳಸಂಹರ ॥
ಮುರಹರಸರೋಜಜಾಮರವರಾನತದಿವ್ಯ ।
ಚರಣ ಘನತರಪುಣ್ಯಕರಣ ವ್ಯಾಘ್ರಾಜಿನಾ ।
ವರಣ ನತಸಂಕುಲೋದ್ಧರಣ ಸರ್ಪವ್ರಜಾಭರಣ ಸಲಹಾನತರನು ॥೧॥

ಸನ್ನುತಗುಣಾಗ್ರಣಿಯೆ ಸಕಲಧರ್ಮದ ಖಣಿಯೆ ।
ಚೆನ್ನಬಸವೇಶ ದುಷ್ಕೃತನಾಶ ಪೇಳ್ವುದೆನ ।
ಗಿನ್ನು ತಾರಕನ ಸುತರಾ ಗುಹೆಯೊಳಡಗಿರ್ದು ಬಳಿಕಲೇನಾದರೆನಲು ॥
ಚೆನ್ನಾಗಿ ಕೇಳಯ್ಯ ಸಿದ್ಧರಾಮೇಶ ಶಿವ ।
ಸನ್ನುತ ಕಥಾಮೃತದ ಸುಗ್ಗಿಯುಂ ಶೌರ್ಯಸಂ ।
ಪನ್ನನೆಂದೆನಿಪ ಷಣ್ಮುಖನಿಂದೆ ತಾರಕಂ ಮಡಿದ ಸಮನಂತರದೊಳು ॥೨॥

ತಲೆವಡೆದಿರ್ದರ್ ಧರಾವನಿತೆ ಲೋಕದ ಜನರ್ ।
ನಲಿದರ್ ಸಮಸ್ತದೇವಪ್ರತತಿ ದುಂದುಭಿಯ ।
ಮೊಳಗಿನಿಂ ಗುಡಿತೋರಣಂಗಳಿಂ ಸಿಂಗರಿಸಿ ತಂತಮ್ಮ ನಗರಂಗಳ ॥
ಪಳಿ ಪೊಕ್ಕು ಸುಖದಿನಿರುತಿರೆ ತಾರಕಾತ್ಮಜರ್ ।
ಕಲಿತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ।
ಗಳೆನಿಪ್ಪ ಖಳಜನಪರೀ ಮೂವರುಂ ಗಿರಿಗುಹಾಂತರದೊಳಡಗಿರ್ದರು ॥೩॥

ನೂಕಿದರ್ ಖಳರಿಂತು ಬಹುಕಾಲಮಂ ಗುಹಾ ।
ನೀಕದೊಳ್ ಭೇದದಿಂ ಮೇಣೊಂದು ದಿವಸ ಚಿಂ ।
ತಾಕುಳಿತಮಾನಸರ್ ತಮ್ಮೊಳಗೆ ತಾವೆ ನೆನೆದಾಲೋಚನಂಗೈವುತೆ ॥
ನಾಕಿನ್ನು ಚಿಂತೆ ನಮ್ಮಯ್ಯಂಗೆ ವರವಿತ್ತ ।
ಕೋಕನದಗರ್ಭನಂ ಕುರಿತು ತಪವಂ ಮಾಡಿ ।
ಬೇಕಾದ ವರಗಳಂ ಪಡೆದು ದಿವಿಜರ ಬಡಿವೆವೇಕೆ ಸಂಶಯಮೆಂದರು ॥೪॥

ಖಳರಿಂತು ನಿರ್ಧರಿಸಿ ಕ್ರೂರ ತಪಮಂ ಮಾಡಿ ।
ಸುಲಭವಾಗಿರ್ದ ವರವಂ ಪಡೆವೆವೆಂದಾಗ ।
ತೊಳಗುವ ತಪೋವನವ ನೋಡುತ್ತೈತರೆ ಮುಂದೆ ಕಾಣಿಸಿತು ಮನಮುದ
ರೊಳು ॥
ಸುಲಿಪಲ್ಲ ಕೆಂಜಡೆಯ ಕೃಷ್ಣಾಜಿನಾಂಬರದ ।
ವಿಲಸದ್ವಿಭೂತಿಲೇಪನದ ಸರ್ವಾಂಗದು ।
ಜ್ವಲಿಪಕ್ಷಮಾಲಾವಿಭೂಷಿತೋರಸ್ಥಲದ ಮುನಿವರರ್ ಕಣ್ಗೆಸೆದರು ॥೫॥

ಎಲೆ ಸಿದ್ಧರಾಮ ಕೇಳಾ ವನದೊಳೆಸೆವ ತಿಳಿ ।
ಗೊಳದಲ್ಲಿ ಮಿಂದು ಶುಚಿಯಾಗಿ ತೀರವನಡರಿ ।
ನಳಿನಬಾಂಧವಗಂ ನಮಸ್ಕರಿಸಿ ತಮ್ಮ ಮನದಿಷ್ಟಂಗಳಂ ಜಾನಿಸಿ ॥
ಜಲಜಸಂಭವನ ನಿರ್ಮಳಮೂತಮೂರ್ತಿಯಂ ।
ನೆಲೆಗೊಳಿಸಿ ತಮ್ಮ ಹೃತ್ಕಮಲದೊಳ್ ಯೋಗಿಸಂ ।
ಕುಲದೊಳಪ್ರತಿಮರೆಂದೆನಿಸಿ ಖಳರಾಗ ತೊಡಗಿದರುಗ್ರತರತಪವನು ॥೬॥

ಚರಣದುಂಗುಟಮನಿಳೆಗೂರಿ ನಾಸಾಗ್ರದೊಳ ।
ಗಿರಿಸಿ ದೃಷ್ಟಿಯನಮಲತರ ತಪೋವೃದ್ಧಿಯಂ ।
ಹುರಿಗೊಳಿಸಿ ಚಿತ್ತಮಂ ಬಲಿದು ನಿಷ್ಕಂಪನಂ ಮಾಡಿ ಸರ್ವಾಂಗಮೊಳಗೆ ॥
ಇರದೆ ದೇಹಾಭಿಮಾನವನುಳಿದುಮತ್ಯುಗ್ರ ।
ತರವಾದ ನಿಷ್ಠೆಯಿಂ ದುಷ್ಟ ದೈತೇಯರಾ ।
ಚರಿಸುತಿರೆ ತತ್ತಪೋವಹ್ನಿ ಸುಡುತಿರ್ದುದಂದಖಿಳಲೋಕವ ಕ್ಷಣ
ದೊಳು ॥೭॥

ಹಾರಿದುದು ಶಿಖರಿ ಶಿಖರಂ ಸಿಡಿದು ನಭಕೆ ಕಾ ।
ವೇರಿದುದು ನಿರ್ಜರಾಂಬುಪ್ರವಾಹಂಗಳುರಿ ।
ಮೀರಿದುದು ಮುನಿಕುಲಂ ತದ್ವನಮನಾಕ್ಷಣಮತಿತ್ವರಿತಗಮನದಿಂದೆ ।

ಪೇರಿವುದು ಭಯವುನಹಿಸಂಕುಲಂ ತಪೆ ಕರಿಕು ।
ಪೋರಿಪುದು ನಾನಾಕುಜಪ್ರತತಿಯೊಡನೊಡನೆ ।
ಚೀರಿದುವು ಸಕಲಖಗಮೃಗಗಳಿಂ ತಪ್ಪಿಪಿಯುನೇನೆಂದು ಬಣ್ಣಿಸು
ವೆನು ॥೮॥

ಘುಳುಘುಳುಧ್ವಾನದಿಂ ನಾಗರಂ ಕುದಿದು ತಳ ।
ಮುಳಲನೆಚ್ಚಿಸೆ ದಿಗ್ಗಜರಾಜಿ ತಾಪದಿಂ ।
ತಲೆಗೊಡಹೆ ಶೇಷನ ಫಣಾಮಣಿಗೆ ತಿವಿ ತಾಗೆ ಕಚ್ಛಪನ ಬೆನ್ ಕಾಯಲು ॥
ಜಲರುಹಭವಾಂಡಒಡಿವಾವರಣವುಂ ತುಡುಕಿ ।
ಕುಲಗಿರಿಗಳಚಲತೆಯುಮಾಗಿಪಾ ವಿಧಾತ್ರನುಂ ।
ಬಳಿಕೆ ಸೃಷ್ಟಿಯುನೆಸಗುವಂತಮಿಂ ಲೋಕವುಂ ದಹಿಸುತಿರ್ದುದು ಭರ
ದೊಳು ॥೯॥

ಪಸಿಂಬಿನಸುರರ ತಪಸ್ತೇಜಮುರಿ ಪೆರ್ಚಿ ।
ಭಾನುಮಂಡಲವುಂ ತಿರಸ್ಕರಿಸಿ ವೇಗದಿಂ ।
ಭೂ ನಾಗ ನಾಕಲೋಕದ ಜನರ್ಗತಿ ಭಯಂಕರವಾಗಿ ತೋರುತಿರಲು ॥
ತಾಪದಿಂದಬ್ಜಸಂಭವನಾಗ ಚಿಂತೆಯಿಂ ।
ಧ್ಯಾನಿಸಿದನೆರ್ದೆಯೊಳಗೆ ಮಿಳಿರಿದಿರೊಳಾಂ ಸುಳಿದು ।
ಹಾನಿ ತಪ್ಪದು ಸುರರ್ಗಂ ಪೋಗದಿರಬಾರದೇನ ಮಾಡುವೆನೆಂದನು ॥೧೦॥

ಕತ್ತಲೆಗೆ ಕಪಿಣತೆಯುನಪಿಗಳ್ಗೆ ಗರಿಗಳಂ ।
ಮತ್ತ ಹಸ್ತಿಗೆ ಮುಹಾಯುದ್ಧವ ಧರಾಧರದ ।
ಗೋತ್ರಕ್ಕೆ ಚೈತನ್ಯವುಂ ಕೊಟ್ಟುಡುಗಿಯುವುದೆ ಲೋಕವುಂ ತಾಂ
ಕೃಪೆಯೊಳು ॥
ತತ್ತಾಪಸರ್ಗೆ ವೆಗಪೋದವರೇನೆಂದು ॥
ಚಿತ್ತರಿಪರೋ ಶಿವನ ಕರುಣಮಿರೆ ದಿವಿಜರ್ಗೆ ।
ಮತ್ತಾವ ಭಯಮಿಲ್ಲೆನುತೆ ಬಂದಾಗ ಖಳತಾಪಸರೊಳಿಂತೆಂದನು ॥೧೧॥

ಎಲೆ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ।
ಬಳಲಿದಿರಿ ಒಹಳ ಕಾಲಂ ನಡೆಮುದೀ ತಪಂ ।
ಸಲೆ ಮೆಚ್ಚಿದೆಂ ನಿಮ್ಮ ಮನದಭೀಷ್ಟವುದಾವುದಿತ್ತಪೆಂ ಪೇಳೆನಲ್ಕೆ ।

ಬಳಿಕ ಕಣ್ದೆರೆದು ಕಂಡರ್ ನಳಿನಸಂಭವನ ।
ಸುಲಲಿತಮಹಾಸೌಮ್ಯಮೂರ್ತಿಯಂ ಭಾಳತಟಿ ।
ಮಿಳಿತವಿಲಸಿತಕರಾಂಜಲಿಯೊಪ್ಪೆ ನೈಯಿಕ್ಕಿ ತುತಿಸಿದರ್ ಭಕ್ತಿ
ಯಿಂದೆ ॥೧೨॥

ಜಯಜಯ ಜನನಕರ್ತೃ ಜಯವಾಕ್ಸತೀಭರ್ತೃ ।
ಜಯಜಯ ಜಗದ್ವಿನುತ ಜಯ ಲೋಕಪಾವನತ ।
ಜಯಜಯ ಸುರಜ್ಯೇಷ್ಠ ಜಯ ಸರ್ವ ಜನರಿಷ್ಟ ಜಯಜಯ ಹಿರಣ್ಯ
ಗರ್ಭ ॥
ಜಯಜಯ ಚತುರ್ವದನ ಜಯ ಸಕಲಗುಣಸದನ ।
ಜಯಜಯ ದುರಿತದೂರ ಜಯ ಸುನಿಗಮೋದ್ಧಾರ ।
ಜಯಜಯ ಕೃಪಾಪಾಂಗ ಜಯ ವಿಮಲಸರ್ವಾಂಗ ಜಯಮೆನಸುತ್ತಿಂ
ತೆನರು ॥೧೩॥

ಗಗನಾಗ್ರದೊಳ್ ಮೂಪ್ಪುರಂಗಳಂ ಮಾಡಿನಿಪ್ಪ ।
ಸೊಗಸಾಗಿ ಕನಕಕಲಧೌತಲೋಹಂಗಳಿಂ ।
ನಗರಮೂರಕ್ಕೊಂದೆ ಕೀಲದಂ ಸುರನರಭುಜಂಗಮರ್ ಕಾಣದಿರಲಿ ।
ಮಿಗೆ ಸುರಸಹಸ್ರವರುಷಕ್ಕವೊಂದಾಗಲಂ ।
ತಗಲದಂದೊಂದಂಬಿನಿಂದೆಸೆಯಲೀ ಪೇಳ್ದ ॥
ನಗರಮಳಿಗಲ್ಲದೊಡೆ ಸತತಂ ತಿರುಗುತಿರಲೆಂದು ಮತ್ತಿಂತೆಂದರು ॥೧೪॥

ಖಚರ ಕಿನ್ನರ ಕಿಂಪುರುಷ ಯಕ್ಷ ರಾಕ್ಷಸ ।
ಪ್ರಚಯವಿರದೋಲೈಸಲೆಮ್ಮನೆಡೆವಿಡದೆ ಮ ।
ದ್ವಚನಮನತಿಕ್ರಮಿಸಿ ನಡೆಯದಿರಲೀ ಲೋಕಿಗರ್ ನಾಕಿಗರ್ ಭಯ
ಮೊಳು ।
ಉಚಿತವಿದನೇ ಕರುಣಿಸೆನೆ ಪಾಗ್ವಧೂವರಂ ।
ವಿಚಲಮಾನಸನಾಗಿ ಶಿವಶಿವಾ ಖಲಪೂರ್ವ ।
ರಚಿತಸಂಕಲ್ಪವೇ ತೋರಿದುಪಲಾಯೆನುತೆ ದನುಜರೊಡನಿಂತೆಂದನು ॥೧೫॥

ಅಂತೆ ಪುರಮೂರನೇ ರಚಿಸಿ ನಿಮಗಾ ದಿವಿಜ ।
ಸಂತತಿಗಳೋಲಗಂ ಸಮನಿಸಲ್ ತ್ರಿಪುರಂಗ ।
ಳಂ ತವೆ ರಣಾಂಕಣದೊಳಾವನಂ ಬಾಣೈಕದಿಂದೆಸುವನಾತನಿಂದೆ ॥

ಅಂತಪದುದಾಗ ಪೊಗೆಸುತ ಕಮಲೋದ್ಭವಂ ।
ತ್ರಾಂ ತನ್ನರ್ದನಾಗಸಕ್ಕಂಜೆಯುನಪರ್ಮ ಖಿಲ ।
ದಾತರಂಗದ ಮಹಾನಂದನುಂ ಬಣ್ಣಿಸುವ್ರೊದಾನಂಗೆ ವರವೆಂದನು ॥೧೬॥

ಮಸಗಿ ಸೀರಸಕಲಜಾರಣ್ಯಮುಂ ಬಿಡದೆ ಭ ।
ಕ್ತಿಸುವ ವಹ್ನಿಗೆ ಮದಮಸ್ವಲವಾಗೆ ಸಿಂಡು ಯೋ ।
ಜಿಸುನ್ನವೇನುಂಟು ಮನಸ್ಸಿನೆ ತಾರಕಾತ್ಮಜರ್ ಕನಲಜಂ ವರವೀಯಲು ।
ದರವಲ್ಲಭನ ಕಾರ್ಯಪೂಪ್ಪೃಷ್ಟಿ ತನೆ ಮಯುಂ ।
ಗನಮುಪಿಲಿವಾನವರ್ ಸೂಚಿಸಲ್ ಕೇಳಿ ನಿ ।
ರ್ಮಿಸಿದಂ ಮರಪ್ರಯಮನಸಾಕಾರಜುಂಬತಪ್ರನಾದತತಿ ಮೆರೆಯಲು ॥೧೭॥

ಪೊಗರೊಗಳ ಪೊಂಗೊಂಡ ತಾರಕಾಕ್ಷಂಗೆ ಝಗ ।
ಝಗಿಪ ಜೆನ್ದು ಕೋಟೆ ಕಮಲಸಯನಂಗೆ ಕಾ ।
ಮೊಗೆವ ಕಾಮೊರಸ್ನಿಸಮ ಬೆಳವಿದ್ಯುನ್ಮಾಲಿಗೆ ಕ್ರಮದಿಂ ಪೊಳಲ್ಗಳಾಗಿ ॥
ತಗಣಿತಮಹಾವಿಭವದಿಂದೆ ಸಂಪದದಿಂದೆ ।
ನಗೆ ನೆರೆವ ಸೈನ್ಯಂಗಳಿಂದೆ ಸಂಭ್ರಮದಿಂದೆ ।
ಸೊಗಸು ಬೀರುತ್ತಿರ್ದು ನಿಕ್ಷಿಸುವರಕ್ಷಿಗಳ್ಗೆ ನೆಂಜಿಸಚ್ಚರಿಯನು ॥೧೮॥

ಹರಿದಂತೆ ಚಾರುವನವನಾಲಿಭಿರಂಜಿತಂ ।
ಪರನಂತೆ ಭೋಗಿಸಿಕರಾಲಂಕೃತಂ ಸದಾ ।
ಶರಧಿವೊಲ್ ಬಾಹಣ್ಯಸಂಯುತಂ ಗಿರಿಯಂತೆ ದನುಜರಾಜೋರ್ಗಲಾಶ್ರವಂ ॥
ನರಿಕಿಸಲ್ ವಾಗರ್ಣತಯುಗ್ರತ ಜವಾತ್ರಯತೆ ।
ಸರಮುಕಂಣತಯಿಸ್ಯೆಕ್ಕೆಂದು ಮುರವನಿತೆ ।
ಪರುವ ಕಮಲಪನಾಂತಕನೆ ತಾರಕಾಂಬಕನ ಪೊಂಗೋಟೆ ಕಣ್ಗೆ
ಸೆದುದು ॥೧೯॥

ಜೇಸವನ ನಚ್ಚವಾರಕರವೊಲ್ ತೊಳಲ್ದುವನ ।
ನೇಸರಾಸರ್ ಒಡನೆ ಮಾಂಬಾಡಗಂಗಮುಮು ।
ಸೋಸುವಿಪಪೀಯ್ಯವೆಸಿಶುಲ್ಟಿ ತರದುಂವಮಾನಮುದರಂ ಕೆಳಗೊಳಲ್ಕೆ ॥
ತ ಸುಪರ್ವರದೆ ಕಿಂದು ತೇಗುವರ್ ಪೋಗಿ ತಾ ।
ನೀ ಸುರದ್ವಿಷರ ಸೇರುವೆನೆಂದು ವಿಘು ಬಂದು '
ದೇಸಾಗಿ ನಿಂದುವಿನೆ ರಜತಕೋಟೆವಳಿಯ ನಿರ್ಮಿತಪ್ರಂ 'ಮೆರೆ
ದುದು ॥೨೦॥

ಪಗಲೊಳ್ ಪ್ರಚಾರಮಂ ಮಾಳ್ಪಿನೆಂದೊಡೆ ಖಗಂ ।
ಬಗೆಯುದರೆಯುಟ್ಟುವಂ ಪಕ್ಷದ್ವಯಂಗಳೊಳ ।
ಗಗಲಿ ಕೂಡುವ ಚಂದ್ರಕಲೆಗಳೀ ರಾತ್ರಿಯೊಳ್ ಪೂರ್ಣತೆಯನೆಸಗೀಯುವು॥
ಮಿಗೆ ನಿಲಲ್ಕೆಡೆಗಾಣೆನೀ ಖಳರ್ ತಾಮಸರ್ ।
ಪೊಗುಪೊಡಿದು ನೆಲೆಯೆನುತ್ತಂಧಕಾರಂ ದನುಜ ।
ನಗರಮಂ ಪರಿವೇಷ್ಟಿಸಿರ್ಪುದೆನೆ ಕಾರ್ಬೋನ್ನಕೋಂಟೆಯಿಂ ಪುರಮೆಸೆ
ದುಪು ॥೨೧॥

ಅಮರಾವತಿಯನಿವಗೆ ಸರಿಯೆಂದು ಪೊಗಳೆಯುಂ ।
ತ್ತಮರಿದಂ ಮೆಚ್ಚುವರೆ ಕುಲಗೋತ್ರಘಾತಕಂ ।
ಗಮರ್ವ ಮನೆ ತಾನಾದುದನಿತಲ್ಲದೂರ್ಧ್ವಗಮನಾಪೇಕ್ಷೆಯಿಂ ಮಾಳ್ಪುದು॥
ಸುಮನೋಹರಾಸ್ಪದಂ ಭೂಸ್ವರ್ಗಮಧ್ಯಮನು ।
ಪಮಮಪ್ಪಿವಗೆ ಸಾಟಿಯೆಂತೆನುತೆ ತ್ರಿಪುರಂಗ ।
ಳಮರಪುರಮಂ ನಗುವುವೆನೆ ಕೇರಿಕೇರಿಯ ಸುಧಾಧವಳಿಮಂ ಮೆರೆ
ದುವು ॥೨೨॥

ಇಂತೆಸೆವ ಮುಪ್ಪುರದ ಸಿರಿಯ ಬಣ್ಣಿಪೊಡಾವ ।
ಗಂ ತೀರದತುಳಬಲದೈತೇಯತೀವ್ರತೇ ।
ಜಂ ತೀವಿತಖಿಳ ಲೋಕಂಗಳಂ ಕಂಗಳೆರಡೈನೂರನುಳ್ಳವಂಗೆ ॥
ಚಿಂತೆ ನಿಃಪ್ರತ್ಯೂಹಮಾಯ್ತುಳಿದ ದಿಕ್ಪಾಲ ।
ಸಂತತಿಯ ಮನದಂತರವದೇನೊ ಪರ್ವತಗು ।
ಹಾಂತರದೆ ಮೈಗರೆದ ಪಳೆರಕ್ಕಸರ್ ಬಂದು ಸೇರುತಿರ್ದರ್ ಮಿಳರನ ॥೨೩॥

ಕೇಳಿದೆಯಲಾ ಸಿದ್ಧರಾಮ ದನುಜರ ಭಾಗ್ಯ ।
ದೇಳಿಗೆಯನಗಡುರಕ್ಕಸರಿರ್ದರಿತ್ತಲಿಂ ।
ಪೇಳಲೇಂ ಪೂರ್ವಕಾಲದೊಳಳಿದ ದಾನವರ ಬಂಧುವರ್ಗಂಗಳಾದ ।
ನೀಳ ನಳ ಕೆಮ್ಮೂಕ ಜಂಭ ಧೂಮ್ರಾಕ್ಷ ಖಳ ।
ಕಾಳದಾನವ ಭಟಾಸುರ ಶುಂಭ ಮುಂತಾದ ।
ಕಾಳರಕ್ಕಸರೈದಿ ಸೇರಿದರ್ ತ್ರಿಪುರಮಂ ಪರಿಗಣನೆಗರಿದೆನಲ್ಕೆ ॥೨೪॥

ತಾರಕಸುತರ್ ಗಡ ಸರೋಜಭವನಂ ಕೂರ್ತು ।
ಘೋರತಪಮಂ ಮಾಡಿದರ್ ಗಡಾ ದೈತ್ಯರ್ಗೆ ।
ವಾರಿಜೋದ್ಭವನಿತ್ತ ಗಡ ಸಪ್ಪುರಂಗಳಂ ತದ್ಪುರದ ಬಲ್ಮೆಯಿಂದೆ ॥

ಸೇರಿತು ಗಪ್ಪೈಶ್ವರ್ಯ ತತ್ತ್ರಿಪ್ರದಪಂ ವಹಾತಿ ।
ಗೋರಿಗೊಳಿಸುರ್ ಗತ ಸಮಸ್ತ ಲೋಕಂಗಳೊಳ್ ।
ಪಾರಿಯಿಮಗೇಂತ್ರನ.ತಿ ಸಕಲ ಲೋಕಂಗಳೊಳ್ ಗುಜಗುಜು ಮಸಗು
ತಿರ್ದುದು ॥೨೫॥

ಕೀರ್ತಿಸುವ್ರಪೇಂ ಪ್ರಳಯಕಾಲದ ಜಗತ್ತ್ರಿನೊಳ್ ।
ವರ್ತಿಸುವ ಘೋರತರ ಹರಸಯುಸಜಾತಸಂ ।
ಪರ್ತವಹ್ನಿಗೆ ಕಟ್ಟಿ ಹಾಯ್ದು ಕಟ್ಟ್ಯಾಣಗಿರ್ದ ನೆಳಿಗಳೇನಡ್ಯೈಪುವೇ ॥
ಆರ್ತಮಗೆ ಸರಿಸಮಾನವಿಸ್ನ್ಯ ಲೋಕದೊಳ್ ।
ವರ್ತಿಸುವರಾರೆನುತೆ ಗರ್ವದಿಂ ತಾರಕನು ।
ತರ್ತಮ್ಮ ಸೇನೆ ಸಹಿತ್ಯೈತಂದು ಭೂಲೋಕಮಂ ಸೂರೆಗೊಳುತಿರ್ದರು ॥೨೬॥

ಚಂದಲಂಘನಪಯುಮಿಭಸ್ಯಂದನಾದಿಗಳ ।
ಕೊಂಡಲಂಪಿಂವೆ ತತ್ಪುರಗಳೊಳ್ ಸುತಚಂದ್ರ ।
ಪುಂಡಲಂಬೊಲ್ ಮೆರೆವ ಪೊಗವಬಲೆಯರ ಪಿಡಿದು ತನ್ನೃಪರ
ಜೀವಂಗಳ ॥
ಹಿಂಡಲಂಬುಧಿವೇಳಿಯಾಗಿರ್ದ ಸಕಲಭೂ ।
ಮಂಡಲಂ ಭಯರಸದೊಳಾಳಲದ ಕೇಳುತಾ ।
ಖಂಡಲಂ ಬಹಳ ಚಿಂತಾಕ್ರಾಂತನಾಗಿರಲ್ಕಿತ್ತಲತಿಸಂಭ್ರಮದೊಳು ॥೨೭॥

ಉತ್ಸುಕದಿನಿರುತೊಂದು ದಿವಸಮಾ ದಾನವರ್ ।
ತತ್ಸಕಲ ಚತುರಂಗಮಂ ಕೂಡಿಕೊಂಡು ಸಂ ।
ಪತ್ಸಾಮ್ಯದಿಂ ಕೊಬ್ಬಿ ವಿಪುಲದೋರ್ದಂಡ ಕಂಡೂತಿಯಂ ಕಳೆವೆವೆಂದು ॥
ಉತ್ಸುಕದೊಳ್ಳೈತಂದು ಕಂಗೊಳಿಪ ನಿವರ್ಗಲವಿ ।
ಯತ್ನಿಂಧ.ಪಂ ದಾಂಟೆ ನಾಕಲೋಕಂಬೊಕ್ಕು ।
ಕುಕ್ಷಿತದೊಳಿಪಿಕದಿಕ್ಪಾಲರಂ ಸದೆದು ತತ್ಪುರಕೆ ರಾಣೆಯುಮಿಟ್ಟರು ॥೨೮॥

ಹರಿ ಹರಿವನಸ್ನಿ ಭಗ್ನೀಕೃತವಿಜಯನಾದ ।
ನಿರದೆ ಯಮ ನಿಯಮಮಯಯುತನಾದನಾ ನಿರುತಿ ।
ನಿರುತಂ ಗುಹಾಂತರಮನೈದಿದಂ ಸಲೆ ವರುಣ ಶರಣೆಂದು ಜೀವಿಸಿದನು॥

ಮರುತನುರುತರಪರಾಭವಿಯಾದನತಿಭಯಂ ।
ಕರ ದಾನವರ ದೆಸೆಗೆ ದೆಸೆಗೆಟ್ಟು ಭೀತಿಯಿಂ ।
ದಿರದೆ ಧನದಂ ಬಿನದಮಂ ಬಿಟ್ಟನೀಶಾಸನಾಶು ಗಮನದೆ ಪೋದನು ॥೨೯

ಅಲ್ಲಿಯ ಸಮಸ್ತ ಹಯಗಜಮುಖ್ಯವಸ್ತುಗಳ ।
ನೆಲ್ಲವಂ ತ್ರಿಪುರಕ್ಕೆ ಕಳುಪಿ ಪುರಜನಗಳಂ ।
ಘಲ್ಲಿಸುತೆ ಸುರಪನಂ ಪರಿಭವಿಸಿ ತತ್ಪುರದ ಸತಿಯರಂ ಸೂರೆಗೊಂಡು ॥
ಮೆಲ್ಲಮೆಲ್ಲನೆ ಪೋಗಿ ಪೈಗರೆವ ಸುಭಟರ್ಗ ।
ಳೆಲ್ಲರಂ ಪದೆಬಡಿದು ತಿರುಗಿದರ್ ದಾನವರ್ ।
ಗೆಲ್ಲವೆಂಪೆಂಬ ಕಾಮಿನಿಯ ಮುಂದಲೆವಿಡಿದು ಸೈನಿಕದ ಗದಣದಿಂದೆ ॥೩೦

ಕೋಡದ ಸುಭಟರಿಲ್ಲ ತ್ರಿಜಗದೊಳ್ ಕೂರ್ತು ಕೇಳ್ ।
ಪಾಡದ ದನುಜರಿಲ್ಲ ಕಂಡು ಸಂಬುಗೆಗಳಂ ।
ಬೇಡದವನಿಪರಿಲ್ಲ ದುರ್ಗಮಂ ಧನಮಂ ಸಮಸ್ತಸಂಪದವನಿತ್ತು ॥
ಓಡದ ಪಗೆಗಳಿಲ್ಲ ಬಹು ದಿಗಂತದೊಳಿ ಕ್ಕೆ ।
ಗೂಡದ ವಿಜಯವಿಲ್ಲ ಮಾಡೆ ಮನಸಂದಿದರ್ ।
ಮಾಡದ ಮಹಾಹಿಂಸೆಯಿಲ್ಲ ದಾನವರ ಭುಜಬಲದಿರವನೇನೆಂಬೆನು ॥೩೧

ಈ ಪರಿಯೊಳಖಿಳ ಲೋಕಾಳಿಗಳ ಪಾಳಿಗಳ ।
ನಾ ಪುರದ ದನುಜಪ್ರತಾಪಮುಂ ಕೋಪಮುಂ ।
ವ್ಯಾಪಿಸಿದುದಿತ್ತ ಸುರಪುಂಗವಂ ಭಂಗವಂ ಪಡೆದು ಹಿಮಗಿರಿ ತಟದೊಳು ॥
ರೂಪಳಿದು ಸುರರ ಸಾಮೀಪ್ಯದೊಳ್ ಗೋಪ್ಯದೊಳ್ ।
ಪಾಪಾತ್ಮರಂ ಜರೆದು ಬಯ್ವುತುಂ ಮುಯ್ವುತುಂ ।
ಕೂಪಗತಪುತ್ರಿಕಾವೇಷದಿಂ ರೋಷದಿಂ ಪಲವು ದಿನಮಿರುತಿರ್ದನು ॥೩೨

ಒಂದು ದಿವಸಂ ಸಕಲ ದಿಕ್ಪಾಲಕರ್ವೆರಸಿ ।
ಬಂದು ತದ್ಗಿರಿತಟದ ಘೋರಗಹ್ವರದೊಳ್ ಪು ।
ರಂದರಂ ಕುಳ್ಳಿರಲ್ ಪೂರ್ವಕೃತ ದುಷ್ಕೃತಂ ತಮಗೆ ಕೈಗೂಡಿತೆಂದು ॥
ನೊಂದು ದಿವಿಜರ್ ವಿಧಿಯನುರೆ ಬೈವುತಿರೆ ಸುರಪ ।
ನೆಂದನಿನ್ನೇಕೆ ಶೋಕಿಪಿರಿ ಮುನ್ನಾವನಿಂ ।
ಬಂದುದವನಿಂ ಕಳೆವೆವೇಳಿಯೆನುತೈತಂದು ಪೊಕ್ಕರಜನೋಲಗವನು ॥೩೩

ಕಂಡನಪುರೇಂದ್ರಾದಿ ವೃಂದಾರಕರ ವಕ್ತ್ರ।
ಮಂಡಲವ ದುಗುಡಮುಸಿರೇನಿರೇನಾವ ಖಳ।
ನಂಡಲೆದಪನೆ ಮುಕುಟತಟಘಟಿತವರಕರಾಂಜಳಿಯೊಪ್ಪೆ ಸುರಪಾಲನು॥
ಚಂಡಬಲ ತಾರಕಸುತರ್ ಸಕಲ ಲೋಕವುಂ।
ಹಿಂಡಿ ಹಿಳಿವೆನ್ನಸವೆಯಟ್ಟಲಂವತಿ ಭಯಂ।
ಗೊಂಡು ನಿಮ್ಮಂಘ್ರಿಯಂ ಸಾರ್ದೆವೆನೆ ಸಂತೈಸಿದಂ ದೇವಸಂತತಿಯನು॥೩೪॥

ರಾಜಹಂಸನನೇರಿ ಕಮಲಜಂ ಬಂದು ಸುರ।
ರಾಜಮುಖ್ಯಾಮರಕದಂಬಕಂ ಬೆರಸು ನುತ।
ರಾಜತಮಹಾದ್ರಿಲಕ್ಷ್ಮಿಯಂದದೊಳ್ ರಾಜಾಲಯೋಚಿತಾಸ್ಥಾನನಾಗಿ॥
ರಾಜತ್ಸಮಸ್ತ ಲೋಕೇಶಮಣಿಮುಕುಟನೀ॥
ರಾಜನ ದ್ಯುತಿ ಮುಸಗಲಾ ಸಭೆಯುನಾಗ ಗಿರಿ।
ರಾಜನಂದನೆಯು ವಕ್ಷೋಜಾತಘುಸೃಣಾಂಕಿತಾಂಗನಡಿಯೊಳ್ ಮಣಿ ದರು॥೩೫॥

ದೇವ ಸಾಕ್ಷಾತ್ ಪರಬ್ರಹ್ಮಸ್ವರೂಪ ಭುವ।
ನಾವಲಂಬನ ಸಕಲಗುಣನಿಳಯ ಬಹುಲೋಕ।
ಪಾವನತಪಾದಪಂಕೇಜಾತಯುಗ್ಮ ಸರ್ವೋತ್ತಮ ಭವಾನೀಧವ॥
ಸಾವಧಾನದೊಳೆಮ್ಮ ಬಿನ್ನಪವ ಕೇಳಿ ಕರು।
ಣಾವಲೋಕನದ ಪೀಯೂಷವುಂ ಕರೆಯೆಂದು।
ದೇವತತಿ ಮುಗುಳೆರಗಿ ತುತಿಯಿಸೆ ಮಹೇಶ್ವರಂ ಕಮಲಜನನೀಕ್ಷಿಸಿ ದನು॥೩೬॥

ಅವಧರಿಸು ಜೀಯ ತಾರಕದೈತ್ಯನಾತ್ಮಜರ್।
ದಿವಿಜರಂ ಸದೆಬಡಿದು ಹವ್ಯಕವ್ಯಂಗಳಂ।
ತವಿಸಿ ಧರ್ಮವನಧಃಕರಿಸಿ ದುಷ್ಕರ್ಮಮಂ ಪ್ರಕಟಿಸಿ ಜಗಜ್ಜನರನು॥
ಅವಗಡಿಸಲಿಂದ್ರಾದಿದೇವತೆಗಳೈತಂದು।
ತವ ಚರಣಕಮಲಮಂ ಸಾರ್ದರಿನ್ನವರ್ಗೆ ಬೆಸ।
ಸುವ ಬುದ್ಧಿಯಾವುದೆನೆ ನಸುನಗುತ್ತೀಶ್ವರಂ ಕಮಲಜಂಗಿಂತೆಂದನು॥೩೭॥

ನೋಡಿದೈ ಬೊಮ್ಮ ನೀಂ ದನುಜರ್ಗೆ ಮುಂಬರ್ದ।
ಕೇಡನರಿಯದೆ ವರವನಿತ್ತೆಯವರಿವರ ಸಿರಿ।
ಗೇಡುಗರಲಾ ಮೊದಲ್ ನೀನೀಗ ದಿವಿಜರಂ ಹಿಂದಿಕ್ಕಿ ಬಂದ ಬಳಿಕ॥

ಆಡಲೇನೆಮಗೆ ಪಶುಪತಿಪಟ್ಟಮಂ ಕಟ್ಟಿ ।
ನೋಡಿ ಸಂಗ್ರಾಮದೆ ಪುರತ್ರಯದ ವೀರರಂ ।
ನಾಡೆ ಸಂಹರಿಪೆವೆನೆ ಪರಶಿವನ ನುಡಿಗೇಳ್ದು ಸುರಕುಲಂ ತಲೆವಾಗಿತು॥೩೬॥

ಮೂಗುವಟ್ಟಿರಲೇಕೆ ಶಿವನೆಂದ ನುಡಿ ನಿಮಗೆ ।
ಸಾಗದೋ ಕಮಲಮಿತ್ರನ ಮಹತ್ತ್ವಂಗಳಂ ।
ಗೊಗೆ ಬಲ್ಲುದೆ ಮಿಥ್ಯಮಿದು ತಥ್ಯವೆಂಬುದಂ ಮರುಳುಗಳ್ ನೀವರಿವಿರೇ।
ಭೋಗದೊಳ್ ವ್ಯೆಮರೆದು ನಿಮ್ಮನರಿಯದೆ ವಿಷ ।
ತ್ಯಾಗರದೊಳೋಲಾಡಿ ನಿತ್ಯನವ್ಯಯನಭವ ।
ನಾಗಿ ರಂಜಿಸುವ ಪರಶಿವನನುರೆ ಮರೆದವರ ಪಶುವೆಂದೊಡೇನೆಂದನು॥೩೭॥

ಸಕಲ ಭೂತಂಗಳೇ ಪಶುಗಳ್ ವಿಚಾರಿಸ ।
ಲ್ನಕಳಂಕನಾದ ಪರಮಾತ್ಮನೇ ಪಶುಪತಿ ಸ ।
ವಿಕಲಮತಿಗಳ್ ತತ್ಪ್ರಪಂಚಮಂ ಬಲ್ಲರೇ ರಚಿಸಿ ಪಟ್ಟಿವುನೆನಲ್ಕೆ ।
ಪ್ರಕಟಿಸಿದ ವೃಷಪತಿಯ ನುಡಿಗೇಳ್ದು ಬೆಳಗಿರ್ದ ।
ಮುಕುರದಂತಾಯ್ತುಪರ ಮನದ ಜಾಡ್ಯ ಸ್ವಸ್ಥ ।
ನಿಕರವಗಜಾಪತಿಗೆ ಮಾಡಿದರ್ ಪಟ್ಟಾಭಿಷೇಕಮಂ ವಿಭವದಿಂದೆ ॥೩೮॥

ಆಲಿಸೈ ಸಿದ್ಧರಾಮೇಶ ಹರಿಯಜದಿವಿಜ ।
ಪಾಲಮುಖ್ಯಾಮರಕದಂಬಕಂ ಹರುಷದಿಂ ।
ಕಾಲಕಂಠಂಗೆ ಕಾಣ್ಕೆಯನಿಕ್ಕಿ ನಮಿಸಲತಿಕರುಣದಿಂದಿಂದ್ರನೊಡನೆ ।
ಭಾಳಾಂಬಕಂ ನುಡಿದನೆಲೆ ಸುರಪ ನೀನೆಮಗೆ ।
ಮೇಳೈಸು ರಥವನೆನಲಿಂದ್ರನತಿ ವೇಗದಿಂ ।
ಪೇಳಿದಂ ವಿಶ್ವಕರ್ಮಂಗವಂ ವರವರೂಥವನೊಡರಿಚಲ್ ಬಗೆವನು ॥೩೯॥

ಏನೆಂಬೆನಾ ವಿಶ್ವಕರ್ಮನಿಂದಂ ಭೂಮಿ ।
ತಾನೇ ವರೂಥವಾಯ್ತೀಸುಗಳ್ ತಾರೆಗಳ್ ।
ನಾನಾ ಸಮುದ್ರಂಗಳಚ್ಚಾದುವಾ ವಿಂಧ್ಯಗಿರಿ ಹಾಸುವಲಗೆಯಾಯ್ತು ।
ಭಾನುಚಂದ್ರರ ಮಂಡಲಂಗಳೇ ಗಾಲಿ ನೊಗ ।
ನಾ ನಿಸಿ ದಿವಸ ದಕ್ಷಿಣೋತ್ತರಾಯಣ ಯುಗವು ।
ನೂನವೇದಂಗಳೇ ಮೆರೆವ ಕುದುರೆಗಳಾಯ್ತು ಶಾಸ್ತ್ರಮೇ ಕೀಲಾದುವು ॥೪೦॥

ಎಸೆವ ಮಿಳಿ ಸರ್ವಮುಪನಿಷದಾಳಿ ಹಯರಜ್ಜು।
ಮಿಸುಪ ಚಪ್ಪ್ಪ್ರಿಗೆಯೋಂಕಾರಂ ಮಹಾಮೇರು।
ಪೊಸತಪ್ಪ ಚಾಪವಹಿರಾಜನೇ ಸಿಂಜಿನಿ ಸರೋಜಾಕ್ಷನಸ್ತ್ರವಾಗೆ॥
ಬಿಸಜಾಸನಂ ಸೂತನವುಲನಪ್ಪಂಗಸೆಯ।
ರಸಮನಯನಂಗೆ ಚಾಮರವನಿಕ್ಕುವರಾದ।
ರಿಸಕದಿಂ ನಭವನಕ್ಕಿಱುವ ಮಂದರನಗಂ ಛತ್ರಮಂದೆಸೆದಿರ್ದುದು॥೪೩॥

ಆವ ದೇವರ್ಗೆ ಪಿವಶಿವ ಮಹಾದೇವ ವಿ।
ರ್ಪ್ವವನೀತಳ ರಥಂ ಮತ್ತಾವ ದೇವರ್ಗೆ।
ಗೋವಿಂದನೇ ಶರಂ ವಿಧಿ ಸೂತನಾಮ್ನಾಯತತಿ ಹಯಂ ಫಣಿರಾಜನೇ॥
ಆವ ದೇವಗೆ ಸಿಂಜಿನಿ ಮಹಾಮೇರು ಮ।
ತ್ತಾವ ದೇವರ್ಗೆ ಧನುವೀ ಚರಾಚರದೊಳಾ।
ದೇವನೇ ದೇವನಾತಗೆ ದೇವರಿಲ್ಲೆಂದು ಸರ್ವಲೋಕಂ ನುತಿಸಿತು॥೪೪॥

ಕರತಳದೆ ವಾಘೆಯಂ ಪಿಡಿದಜಂ ಸತ್ತ್ರಣವ।
ಭರಿತಚಮ್ಮಟಿಗೆಯಿಂ ವೇದಮಯವಾಜಿಗಳ।
ಸಿರದೆ ಝಂಕಿಸಲೊಡಂ ರಥಸಹಂ ಹಯಮುಭ್ರಮಂಡಲವನಂಡಲೆದವು॥
ಕರುಣಿ ಬಿಜಯಂಗೈವುದೆನೆ ಸುರರ ನುಡಿಗೇಳ್ದು।
ಪರಮಪಾವನಮೂರ್ತಿ ಶಂಕರಂ ದೈತ್ಯ ಸಂ।
ಹರಣಕಾರಣನೆದ್ದನಾ ಮಹಾಸ್ಥಾನರಂಜಿತ ಸಿಂಹಪೀಠದಿಂದೆ॥೪೫॥

ಪೊಳೆವ ತಳಿವಾಲಿಯಂ ಲೀಲೆಯಿಂ ತೆಗೆತೆಗೆದು।
ಕೆಲದವರ್ ಕೈಸಾರ್ಚೆ ವಿಲಸದ್ವಿಭೂತಿಯಂ।
ಧಳಥಳಿಪ ಸರ್ವಾಂಗಕುದ್ಧೂಳಸಂಗೆಯ್ದು ಪೆಡೆವಣೆಯ ಹಾವುಗಳನು॥
ಪೊಳೆವಸಂ ಕಡೆಯು ಸರಪಳಿ ತೋಳಭೂಷಣ।
ಕ್ಕಳವಡಿಸಿ ಪುಲಿದೊವಲ ಮುಂಜೆರಗು ಮಿಗೆ ದೇಸೆ।
ಯೊಳೆ ಮೆರೆವುತೀಶ್ವರಂ ನಸುನಗುತ ನಡೆತಂದು ರಥವೇರಲನುವಾ
ದನು॥೪೬॥

ಉದರದೊಳನೇಕಬ್ರಹ್ಮಾಂಡಂಗಳಂ ತಾಳ್ದ।
ಮದನರಿಪು ತನ್ನ ವಾಮಾಂಘ್ರಿಯನಿಡಲ್ ರಥಂ।
ಮದಿದ ಭಾರದೆ ರಸಾತಳಕಿಳಿಯೆ ಗಾಲಿಗಳ್ ನೆಗ್ಗಿದವು ಹಯಮುಳುಕಲು॥

ಇದನೀಕ್ಷಿಸುತಿ ಸರೋಜಾಂಬಕಂ ವಾತಾಳ।
ಸದನಮಂ ಪೊಕ್ಕು ವೃಷಭಾವತಾರದಿನಾಗ॥
ಳದುಭುತ ವರೂಥವುಂ ನೆಗಪಲಾಕ್ಷಣದೊಳೊಯ್ಯಾರದಿಂ ರಥವೆಸೆ
ದುದು ॥೪೭॥

ತಲೆಗೊಡಹಿದುವು ವೇದವಾಜಿ ಬಳೆವೊಳೆಯುಚ್ಚ।
ನಳವಡಿಸಿದಂ ಮತ್ತೆ ವಿಶ್ವಕರ್ಮಂ ರಥಂ।
ಥಳಥಳಿಸಿದುದು ವೇದವಾಜಿಯಂ ಚಪ್ಪರಿಸಿ ಸಾರಥಿ ರಥಪ ನಾಗಿಸೆ॥
ನಲಿದು ಹರನಿಕ್ಕಲದೊಳಖಿಳವೇದವಿತಾನ।
ವುಲಿವುತಿರೆ ರಥವೇರಿ ಶಂಭು ಸರ್ವೇಶ್ವರಂ।
ಕಲಹಸನ್ನಾಹವುಂ ಕೈಕೊಂಡು ಸಕಲಗಣಕುಲದೊಡನೆ ನಡೆಗೊಂ
ಡನು ॥೪೮॥

ಪಸಿದೊಡಂಬುಜಭವಾಂಡಂಗಳಂ ಕಳಚಿ ಭ।
ಕ್ಷಿಸುವ ಬಾಯಾರಿದೊಡೆ ಸಪ್ತಶರನಿಧಿಗಳಂ।
ಮಸಗಿ ಸೂಳೊಂದರೊಳ್ ಸುರಿವ ಭೂಷಣಕೆಂದು ಸಿಡಿಲ ತಂಡುಲವ್ವಳಿ
ಸುವ ॥
ಶಶಿರವಿಗಳಂ ರನ್ನಕನ್ನಡಿಗಳೆಂದು ನಿ।
ಟ್ಟಿಸುವ ಕುಲಗಿರಿಗೆ ಲೀಲಾಕಂತುಕತೆಯನಾ।
ಗಿಸುವ ವಿಷಮಪ್ರಮಥಗಣವೈದುತಿರ್ದುದಗಣಿತಕೋಟಿಸೇನೆಸಹಿತ ॥೪೯॥

ಬಿಗಿದ ರಂಜೆಗಳ ತವೆ ಕೊಂಬುಕತ್ತಿಗಳ ಸಬ।
ಳಗಳ ಬಾಂಬರಮೆಸೆವ ಠಕ್ಕೆಯುದ ನಾಳಿವಿಲ್।
ಝುಗಝುಗಿಪ ಪೊಸ ಪೊನ್ನಪಕ್ಕರಕ್ಕೆಗಳ ಜೋಲುವ ಘಂಟೆಗಳ ದನಿಗಳ॥
ಮಿಗೆ ಹೊಳೆವ ಹೊಮ್ಮಿಳಿಯ ಹಮ್ಮುಗೆಯ ನಿರ್ಭಿನ್ನ।
ನಿಗಳದ ಮದಾಂಧಸಿಂಧುರವರ್ಗಮಸ್ತಕವು।
ನಗಿದು ಪೊನ್ನಂಕುಶದ ಮೈವಳಿಗೆ ತರ್ಪ ಜೋದರ ಹಿಂಡು ನಡೆಗೊಂ
ಡುದು ॥೫೦॥

ಸಿಂಗಾಡಿಗಳ ಸರಳಹೊದೆಯ ಮೊಗರಂಬುಗಳ।
ಪೊಂಗೆಜ್ಜೆಗಳ ರತ್ನವಾವುಡದ ಬಂಧಿಸಿದ।
ಕಂಗೊಳಿಪ ಹಲ್ಲಣದ ಖಣಖಣಧ್ವಾನದಿಂ ರಂಜಿಸುವ ಕಠಿಯಣಗಳ॥

ಮುಂಗಾಲ ಕಡೆಯುಗಳ ಭೂಷಣದ ಸಲೆರಾಪ್ತ ।
ರಂಗಿತದ ಗಮನಗಳ ರಾಜಿಸುವ ತೇಜಿಗಳ ।
ಸಂಗಡದ ರಾವುತರ್ ನಡೆಗೊಂಡರಗಣಿತಂ ಬಿರಳ ಚಮತ್ಕೃತಿಗೆಯಿಂದೆ ॥೫೧॥

ತುಂಬಿಪಂಬುಗಳ್ ಮೋಣೆಡಿಕಿರಿವ ಶಸ್ತ್ರಕುಲ ।
ಅಂಬರವನಡರುವ ಕೇತುವಿತತಿಯು ಹಯಕ ।
ಅಂಬಕದ ಚಾರುಲಿಘುಗಮನದ ಸಚೀತ್ಕಾರಚಕ್ರಂಗಳಿಂ ಸೊಗಸುವ ॥
ಇಂಬಾದ ಮಾಂಪೇರ್ಗಳಿಂ ಪತ್ತಿ ಟಂಕೃತಾ ।
ಅಂಬರದೆ ಲೋಕಮಂ ಕಿವುಡಾಗಿಸುವ ರಥಿಕ ।
ಕಂಬುಪೇರಂ ಕೋಟಿಯಾಸುಕೋಟಿಗಳ್ ನಡೆಗೊಂಡರತುಳಸನ್ನಾಹದಿಂದೆ ॥೫೨॥

ಪಂಗಗಳ್ ಪಲಗೆಗಳ್ ಬಿಂದಿಯುದ ಸಬಳಗಳ್ ।
ಸುರಗಿಗಳ್ ಬಿಚ್ಚುಗಂಬಿನ ಹೂಪಯು ಕೈಪೊಡೆಯ ।
ತರತರದ ಚೋಪುಗಳ ತಲೆತೊಳಗಳ ಸಮರಸನ್ನಾಹದಾಯತಗಳ ।
ಬಿರುದುಗಳ ಸಾಲಸತ್ತಿಗೆಯು ಚಮರಗಳ ಪರಿ ।
ಸರಿಯ ಕಾಲಾಳ್ಗಳ್ಳಿದಿದರಭಟಸೇನೆಯೊಳ್ ।
ಪರಿಗಣನೆಗರಿದೆನಿಸಲ್ಕೆ ನಾನಾಪಾಣಿಗೆಯ್ದು ಕಡು ತವಕದಿಂದೆ ॥೫೩॥

ಹರಿಮಯಂ ಘನರಥಧ್ವಜಮಯಂ ಗಜಮಯಂ ।
ಕರಿಮಯಂ ಪಟಹಚಮ್ಮಟಿಮಯಂ ಭಟಮಯಂ ।
ಶರಮಯಂ ಶಾಸ್ತ್ರನಿಸ್ವನಮಯಂ ಜನಮಯಂ ನಾನಾಯುಧಾವಳಿ
ಮಯಂ ।
ಸ್ವರಮಯಂ ಕಹಳೆಗಣಕುಲಮಯಂ ಬಲಮಯಂ ।
ಗರಮಯಂ ಭೂತಸಂತತಿಮಯಂ ಖತಿಮಯಂ ।
ಸರಮಯಂ ನೆಗಪ್ಪೆ ಕಿನ್ನರಮಯಂ ಭರಮಯಂ ಹರಸ ಸೇನಾಂಬುಧಿ
ಯೊಳು ॥೫೪॥

ಕರಿಯುಂತೆ ಗಿರಿಯುಂತೆ ನವಿಯುಂತೆ ಸಿಖಿಯುಂತೆ ।
ಪರಸಂತೆ ಸುರವಂತೆ ಸರವಂತೆ ಪುರವಂತಿ ।
ಅರವಿ ಪುಷ್ಕರ ಪುಂಡರೀಕ ಪಟ ಶಂಖ ವಿಷ ಪತ್ರ ಶರ ಸುಮನಾಸ್ಮಿತಂ॥

ಶರಧಿಯಂತಬುಜಾಕ್ಷನಂತೆ ಕೇಸರಿಯಂತೆ ।
ಸರಸಿರುಹದಂತೆ ವಸುಚಕ್ರಪಂಚಾಸ್ಯರಣ ।
ದುರುರಸೋನ್ಮ್ರಗ್ನಾಳಿಯಿಂದೆ ಶೋಭಿತವಾಗಿ ಪಡೆ ಪಡೆಪಿನಿಂ ನಡೆ
ದುವು ॥೫೫॥

ಏನೆಂಬೆನೈ ರಾವು ಶಂಕರನ ಪಡೆ ನಡೆವು ।
ದಾನವರ ಪುರಸಮೀಪದ ಮಹಾಬಯಲೊಳಗೆ ॥
ತಾನಿಳಿದುದೀಶ್ವರನ ಪಾಳೆಯಂ ಹರಿಯಜರ ಪಾಳೆಯಂಗಳ್ ಭರದೊಳು ॥
ನಾನಾ ವಿಲಾಸದಿಂದೆಡಬಲದೊಳಿಳಿಯೆ ಪ್ರವು ।
ಥಾನೀಕಮುಭವನವರಾಜಿಯೊಳ್ ದೇವನಂ ।
ತಾನಕಂ ಮುಂದೆ ಬಿಡೆ ಮಿಕ್ಕ ಸೇನಾಪತಿಗಳಿಳಿದರೊಂದೊಂದೆಸೆ
ಯೊಳು ॥೫೬॥

ಕರಿಯ ರಂಚಿಕೆಗಳುಂ ವಾಜಿಗಳ ಹಲ್ಲಣಂ ।
ವರ ವರೂಥದ ಸಿಂಧವೆಸೆವ ಸುಭಟರ ಜೋಡು ।
ತಿರದ ಸೀಸಕ ಬಾಹುರಕ್ಕೆ ಕೈಪೊಡೆ ಬಿಗಿದ ವಜ್ರಾಂಗಿ ಬತ್ತಳಿಕೆಯಿಂ ॥
ಇರದುಳಿದ ಸದಳಿಗರ ಸಾಧನಸಮಗ್ರಮುಂ ।
ತರತರದೊಳಿಳಿದುವತಿಚೆಲ್ವಾಗಿ ಪಾಳೆಯಂ ।
ಪರಿಶೋಭೆವಿಡಿದು ರಂಜಿಸುತಿರ್ದುದೆಲೆ ಸಿದ್ಧರಾಮೇಶ ಕೇಳೆಂದನು ॥೫೭॥

ಇಂತೆಸೆವ ಚೆನ್ನಬಸವೇಶನ ಪುರಾಣಮಂ ।
ಸಂತಸದೆ ಬರೆದವರ್ಗೋದಿದರ್ಗರ್ಥಮಾ ।
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ ॥
ಸಂತತಂ ಸಕಲಸುಖಮಂ ಸಕಲಭೋಗಮನ ।
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ ।
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ॥೫೮॥

ಕಾರಿಕಾಲಮ್ಮೆಯ ರಗಳೆ.

ಹರಿಹರ.

ಈತನು ವೀರಶೈವ ಕವಿಯು. ಇವನು ಕ್ರಿ. ಶ. ೧೧೪೧ ರಿಂದ ೧೧೭೩ ರ ವರೆಗೆ ಆಳಿದ ಹೊಯಿಸಳ ರಾಜನಾದ ನರಸಿಂಹಬಲ್ಲಾಳನ ಆಳಿಕೆಯಲ್ಲಿ ಹಳೆಯಬೀಡಿನಲ್ಲಿ "ಕರಣಿಕರ ಕುಲತಿಲಕ" ನಾಗಿದ್ದ ನೆಂದು ತಿಳಿಯುತ್ತದೆ. ಈತನ ಗುರುವು ಹಂಪೆಯ ಮಾಯಿದೇವನು. ಮುಂದೆ ಇವನು ರಾಜನಲ್ಲಿ ಲೆಕ್ಕ ಬರೆಯುವ ತನ್ನ ಉದ್ಯೋಗವನ್ನು ಬಿಟ್ಟುಕೊಟ್ಟು ಹಂಪೆಯ ವಿರೂಪಾಕ್ಷನ ಸನ್ನಿಧಿಗೆ ಬಂದನು. ಅಲ್ಲಿ ಅವನು ಗಿರಿಜಾಕಲ್ಯಾಣ ರಗಳೆಗಳು ಮೊದಲಾದ ಗ್ರಂಥಗಳನ್ನು ಬರೆದು ಕನ್ನಡ ಭಾಷೆಯಲ್ಲಿ ಒಬ್ಬ ಮಹಾಕವಿ ಎಂದೆನಿಸಿಕೊಂಡಿದ್ದಾನೆ.

ಈತನು ಬರೆದ ರಗಳೆಗಳಲ್ಲಿ ಪುರಾತನರ ರಗಳೆ ಮತ್ತು ಶಿವಶರಣರ ರಗಳೆ ಎಂದು ಎರಡು ಭಾಗಗಳನ್ನು ಮಾಡಬಹುದು. ಪುರಾತನರ ರಗಳೆಗಳಲ್ಲಿ ತಮಿಳು ದೇಶದಲ್ಲಿ ಪ್ರಸಿದ್ಧಿಹೊಂದಿದ ೬೩ ಪುರಾತನರ ಚರಿತ್ರೆಗಳು ಬಂದಿವೆ. ಶಿವಶರಣರ ರಗಳೆಗಳಲ್ಲಿ ಬಸವೇಶ್ವರನ ಕಾಲದಲ್ಲಿ ಉತ್ಪನ್ನರಾದ ಶಿವಶರಣರ ಚರಿತ್ರೆಗಳು ಬಂದಿವೆ. ಈಗಿನ ಗ್ರಂಥದಲ್ಲಿ ಪ್ರಕಟವಾದ ರಗಳೆಯು ೬೩ ಪುರಾತನರಲ್ಲಿ ಒಬ್ಬಳಾದ ಕಾರಿಕಾಲಮ್ಮೆ ಎಂಬವಳದು ಇದೆ.

ಈ ರಗಳೆಯನ್ನು ಎರಡು ಪ್ರತಿಗಳ ಸಹಾಯದಿಂದ ಸಿದ್ಧಪಡಿಸಿರುತ್ತೇವೆ. ಒಂದನೆಯದು ಮೈಸೂರ ಓರಿಯೆಂಟಲ್ ಲಾಯಬ್ರರಿಯಲ್ಲಿ ದೊರೆತದ್ದು, ಎರಡನೆಯದು ತುಮಕೂರ ಜಿಲ್ಲಾ ಪಂಡಿನ ಶಿವರ ಎಂಬ ಗ್ರಾಮದಲ್ಲಿ ದೊರೆತದ್ದು.

ಕಾರಿಕಾಲಮ್ಮೆಯ ರಗಳೆ.

ಕಂದ॥ ಸಕಲ ಜನಂ ಕಾಣುತೆ ಕೌ ।
ತುಕಮೆನಲಾ ಕಾರಿಕಾಲೊಳಿಪ್ಪಮ್ಮೆಯುರಂ ।
ಸುಕರಮೆನೆ ಮೆರೆದನಾಸಂ ।
ಜಕರಂ ಕರುಣಾಬ್ಧಿ ಹಂಪೆಯ ವಿರೂಪಾಕ್ಷಂ ॥

ರಗಳೆ.

ಧರೆಗೆಸೆವ ಚೋಳದೇಶದೊಳೊಂದು ಸುಖಕರಂ
ಕರಮೊಪ್ಪುವುದು ಕಾರಿಕಾಲೆಂಬ ಶಿವಪುರಂ
ಅಲ್ಲಿರ್ಪಳೋರ್ವಳ್ಶಿವಜ್ಞಾನಸಂಪನ್ನೆ
ಸಲ್ಲಲಿತಸತ್ಯಭಕ್ತ್ಯಾಗಮಪ್ರತಿಪನ್ನೆ
ತನ್ನ ನಾಮಂ ಕಾರಿಕಾಲಮ್ಮೆ ಎಂಬುದದು
ಪನ್ನಗಾಭರಣಂಗತಿ ಪ್ರೇಮಹರ್ಷವದು
ತನಗೆ ಪತಿಯಾಗಿರ್ಪನಲ್ಲಿ ಮಾಣಿಕಶೆಟ್ಟಿ
ಧನದಂಗೆ ಪುರುಡಿಪ ಸದರ್ಥತ್ವಮಂ ಮುಟ್ಟಿ
ಆತಂಗೆ ಸತಿಯಾಗಿ ಸಮಸುಖದೊಳೊಪ್ಪುತುಂ
ನೂತನದ ಶಿವಭಕ್ತಿಯಿಂ ಮನದೊಳಪ್ಪುತುಂ
ಗುಪ್ತ ಮಾಹೇಶ್ವರಿ ಪರಾಧೀನೆ ಪತಿಭಕ್ತೆ
ಆಪ್ತೆ ಶರ್ವಂಗೆ ಭಕ್ತ್ಯಾವಲೋಕನಯುಕ್ತೆ

ಇರ್ಪಳಾರುಂ ಭಕ್ತೆ ಎಂದರಿಯರಾಕೆಯಂ
ಸರ್ಪಭೂಷಣಚರಿತಭಂಕಾವಲೋಕೆಯಂ
ಅತ್ತೆಮಾವಂ ಗಂಡರರಿಯರಾ ಭಕ್ತಿಯಂ
ಮತ್ತೆ ಮನೆಯೊಳಗುಳ್ಳರರಿಯರಾ ಭಕ್ತಿಯಂ
ಬೋನವಂ ಮಾಡುವೆಡೆ ದೇವಾರ್ಚನಾಸ್ಥಳಂ
ಏನೆಂಬೆನಲ್ಲಿ ಸಿಂಹಾಸನಂ ಕರತಳಂ
ನೆನೆವ ಘನ ಚಿಂತೆ ಸಕಲ ಸ್ತೋತ್ರವಭವಂಗೆ

ಮನದ ನಿರ್ಮಳವಗ್ಗವಣಿ ಮಹಾದೇವಂಗೆ
ಕೆಯ್ಯ ಕೀರೆಯಿ ಪರಿಮಳದ ಪುಷ್ಪವಭವಂಗೆ
ಸುಯ್ಯ ಕಂಪೆ ಗುಗ್ಗುಳಧೂಪವಾ ಮಹಿಮಂಗೆ
ನೋಟವೇ ಬೆಳಗಿನಾರತಿ ಶಂಕರಂಗಲ್ಲಿ
ಊಟವಲ್ಲಿಯೆ ಸಮೆದ ಬೋನದೋಗರವಲ್ಲಿ
ಇಂತಾಗುವರಿಯಃದಂತಿರೆ ಶಿವನನರ್ಚಿಪಳು
ಇಂತು ಶಿವಭಕ್ತಿಯಂ ಮನದೊಳಗೆ ಪೆರ್ಚಿಪಳು
ಓವಿ ಸಾಧಿಸಿ ಬೆಳೆಯಿಸುವಳಲ್ಲಿ ಭಕ್ತಿಯಂ
ತೀವಿ ತುಳ್ಕಾಡಿ ಮುಚ್ಚುವಳಂಜಿ ಭಕ್ತಿಯಂ
ರುದ್ರಲೋಕವೆ ಪುಟ್ಟಿದೂರೆಂದು ಭಾವಿಪಳು
ರುದ್ರನೇ ತಂದೆಯುಂ ತಾಯೆಂದು ಭಾವಿಪಳು
ಕೈಲಾಸವೇ ತವರ್ಮನೆಯೆಂದು ಭಾವಿಪಳು
ಶೂಲಿಯಣುಗರ್ಸಹೋದರರೆಂದು ಭಾವಿಪಳು
ಆಸುರದ ಸಂಸಾರವಂ ಗಿರಿಜೆಗರಿಪುವಳು
ಆಸರಂ ಬೇಸರಂ ಶಂಕರಂಗರಿಪುವಳು
ಮನದೊಳಗೆ ಮನ್ನಿಸುವಳರ್ಚಿಸುವಳಾಡುವಳ್
ಮನದೊಳಗೆ ನೋಡುವಳ್ ಮನದೊಳಗೆ ಪಾಡುವಳ್
ಮನದೊಳಗೆ ದೇವಂಗೆ ಬಿನ್ನಪಂ ಮಾಡುವಳ್
ಮನದೊಳಗೆ ಸಂಸಾರದಿರವಿಂಗೆ ಪೇಸುವಳ್
ಅನವರತ ಪರಮ ಶಿವಚಿನ್ಮೂರ್ತಿ ಚಿಂತಾಪರೌಸ್ಕಿ
ಅನಸೂಯೆ ಭಕ್ತೆಯಭಿಮಾನಿ ಲಿಂಗಧ್ಯಾನಿ
ಮಾಡುವುದು ಕೆಲಸವದು ಪೂಜೆ ಸರ್ವೇಶಂಗೆ
ನೋಡುವುದು ಮನವಾರ್ತೆ ದರ್ಶನವದೀಶಂಗೆ
ತಾನರಿವಳಿಂದುಧರನರಿವನರಿವವರಿಲ್ಲ
ಏನೆಂಬಿನೀ ಪೂಜೆಯಂ ಶಂಭುವೇ ಬಲ್ಲ

ಇಂತು ಗುಪ್ತಾರಾಧನಾನಂದೆ ಇಪ್ಪುದಂ
ಕಂತುಹರನೆಂತು ಲೆಕ್ಕಿಸಲಾರನಿಂತಿದಂ
ಪ್ರಕಟಿಸುವೆನೆಂಬ ಭರದಿಂ ಚಂದ್ರಶೇಖರಂ
ಸಕಳ ಲೋಕಕ್ಕರುಪಲೆಂದು ಸರ್ವೇಶ್ವರಂ

ಸಾಧು ಭಕ್ತನ ವೇಷಮಂ ತಳೆದನೊಲ್ದಿತ್ತ
ವೇಥೆಯೊಳಗಿರ್ದನಾ ಕಾರಿಕಾಲೆಯೊಳತ್ತ

ಒಂದು ದಿನಮಿರುತಲಿರಲಲ್ಲಿ ಮಾಣಿಕಶೆಟ್ಟಿ
ಗೆಂದಂದು ಕಾಣ್ಕೆಯಂ ತಂದಂ ಮನಂ ಮುಟ್ಟಿ
ಈಳಿಯಿಂದಂ ಕೆಲವು ಕಾಲದ ಫಲಂಗಳಂ
ಬಾಳಚೂತವು ಪೂತ ಕಲ್ಪಫಲತತಿಗಳಂ
ಅಮ್ಮೆಗೆ ರಜತಗಿರಿಯ ಪಯಣಮಂ ತರ್ಪಂತೆ
ಅಮ್ಮೆಗೆ ದಿವ್ಯಾಮೃತದ ಫಲತತಿಯ ತರ್ಪಂತೆ
ತಂದು ಕಾಣ್ಕೆಯನೀಯೆ ಕಂಡು ನೆರೆ ಕೊಂಡಾಡಿ
ತಂದವರ್ಗೂಡಕೊಟ್ಟು ಕಳುಹಿ ಹಣ್ಣಂ ನೋಡಿ
ಹಾರೈಸಿ ಹೊಸ ಫಲವಿದೆಂದು ಹರುಷಂಬಟ್ಟು
ಕಾರಿಕಾಲಮ್ಮೆಯರ ಕೆಯ್ಯೊಳೊಲವಿಂ ಕೊಟ್ಟು
ಅತಿ ಸುರಕ್ಷಿತದಿಂದ ಬಯ್ತಿಡೆನುತುಂ ಪೇಳ್ದು
ಪತಿ ಪೋದನತ್ತಲಾ ವ್ಯವಹಾರಮಂ ತಾಳ್ದು

ಪೋಗೆ ಕಂಡಪ್ಫಲಂಗಳನಪೂರ್ವಂಗಳಂ
ರಾಗದಿಂ ಕೊಂಡು ಬಂದಳ್ಮ್ರಾತನಂಗಳಂ
ಆಹಾ ಶಿವಂಗೆ ಶಿವಭಕ್ತರ್ಗೆ ಯೋಗ್ಯವಿವು
ಆಹಾ ಮಹಾದೇವ ಮರ್ತ್ಯರ್ಗಯೋಗ್ಯವಿವು
ಎಂದವಂ ಬೈತಿಟ್ಟು ಕೆಲಸದ ಶಿವಾರ್ಚನೆಗೆ
ಬಂದಳಾ ಗುಪ್ತ ಮಾಹೇಶ್ವರಿಯಡುವಮನೆಗೆ
ಎಂದಿನಂದದೆ ನಿತ್ಯ ನೇಮಂಗಳಂ ಮಾಡಿ
ತಂದು ಬೋನಕ್ಕೆ ಮೇಲೋಗರಮುಮಂ ಕೂಡಿ
ಆರೋಗಿಸಲ್ಕಿಕ್ಕಲನುವಾಗುತಿರಲಲ್ಲಿ

ಹಾರೈಸಿ ಶಂಕರಂ ರೂಪುದೋರಿದನಲ್ಲಿ
ನಿಕಮುಮಿವೆಳೆಯಜಡೆ ಪುಲಿದೊವಲ್ವಿಸ್ತರಂ
ಲೋಕಮೊಳ್ಸುಳಿವ ತಪಸಿಗಳಂತಿರಲ್ಕರಂ
ಬರ್ದರ್ ಈ ಎಡೆಗೆ ಬಂದ ಪರಿ ಎಂತಯ್ಯ

ಇರ್ದಿರ್ದುದೇಕೆ ಭವಿಗಳ ಮನೆಗೆ ಬಂದಯ್ಯ
ಏಕೆ ಬಂದ್ಯೈ ಮನೆಯವರ್ಕರಂ ಪೊಲ್ಲೈನಲ್
ಏಕೆ ಬಂದ್ಯೈ ಭಕ್ತಿ ಇಲ್ಲಿಯುಂಟೇ ಎನಲ್
ಭಕ್ತೆ ಎನಲಮ್ಮೆಸರಿದೊಡೆ ಕಂದಿಪವಳೆಂದು
ಯುಕ್ತಿಯಿಂ ಸುಮ್ಮನಿರಲಮ್ಮೆಯನುಚಿತವೆಂದು
ಭಕ್ತರೆಂದರಿಯೆವಾರೆಂದರಿಯೆವೆಲೆಯಮ್ಮ
ಭಕ್ತಿಗಟ್ಟೋಗರವನಿಕ್ಕು ಪೋದಪೆವಮ್ಮ
ಎನೆ ಗುಪ್ತತನದೊಳಿರಲಾರದುಕ್ಕಲ್ಭಕ್ತಿ
ಮನದೊಳಕ್ಕಾಡಿ ನಾಲಿಗೆಗೆ ಬರುತಿರೆ ಭಕ್ತಿ
ಮನದ ಗರ್ಭಿಣಿ ಜಿಹ್ವೆಯಿಂ ಬೆಸಲೆಯಪ್ಪಂತೆ
ತನುವಿಡಿದ ಭಕ್ತಿಯಿಂ ಕಾಣ್ಬತುಸುರುವಳಿಂತೆ
ಆರುಮಂ ಕಾಣ್ಬುದಕೆ ಮುನ್ನವಾರೋಗಿಪುದು
ಆರುವರಿಯದ ತೆರದಿ ತ್ವರಿತದಿಂ ಕರುಣಿಪುದು
ದೇವ ಕಂಡೊಡೆ ಭಕ್ತೆಯಿಂತರುಪಿದಂತಕ್ಕೆ
ದೇವ ಬಳಿಕಾಂ ಬದುಕೆನರಿದೊಡಿರಿದಂತಕ್ಕು
ಎನುತಲ್ಲಿಯಾರೋಗಣೆಗೆ ಕೊಟ್ಟು ಬೇಗದಿಂ
ಘನಮಹಿಮ ಹದುಳನಾರೈಸೆಂದು ರಾಗದಿಂ
ಮನೆಯವರ್ಕಂಡೊಡಂ ಕೊಲುಗೆನ್ನನೆನುತಲ್ಲಿ
ತನಿವಣ್ಣನೆರಡರೊಳಗೊಂದನಿಕ್ಕಿದಳಲ್ಲಿ
ಇಕ್ಕೆ ನಲಿದಾರೋಗಿಸುತಿರ್ಪ ಸಮಯದೊಳ್

ದಿಕ್ಕನೇ ಮನೆಯ ಸೆಟ್ಟಿ ಬಂದನಾ ಪ್ರೌಕ್ತಿನೊಳ್
ಬರಲವಂ ನಸುಗಾಣದಂತೆಯೆ ಭವಂ ಪೋದ
ಉರವಣಿಸುತಾ ಸೆಟ್ಟಿ ಸಂದೇಹಿಸಲ್ಪೋದ
ಇತ್ತಲಾ ಸೆಟ್ಟಿಗೆಡೆಮಾಡಿದಳ್ ಶಿವಭಕ್ತೆ
ಚಿತ್ತದೊಳಗಂಜುತ್ತಲಂಜೆನೆನುತುಂ ಭಕ್ತೆ
ಎಡೆಮಾಡಿಯುಗಲಕ್ಕೆ ಹೆರೆಸಾರ್ದು ನಿಂದಿರಲ್
ಕಡು ಹಸಿದು ಸೆಟ್ಟಿ ಹಣ್ಣೆಲ್ಲಿ ತಾರೆಂದೆನಲ್
ಇಕ್ಕಿದಳ್ಪಣ್ಣೊಂದು ತಂದು ಎಡೆಯೊತ್ತಿಂಗೆ
ಮಿಕ್ಕ ಸಂದೇಹದಿಂ ಶಂಕಿಸುತೆ ಗಂಡಂಗೆ

ತಂದಿಕ್ಕಲಿನ್ನೊಂದು ಹಣ್ಣಲ್ಲಿ ತಾರೆನಲ್
ಬಂದಪ್ಸರಿಚ್ಛೇದಿಸಿದಳಲ್ಲಿ ಭೋಂಕೆನಲ್
ಕೆಯ್ಯೊಡನೆ ಹರಣಮಂ ಬೆರಿಸಿ ಕೆಯ್ಯಿಕ್ಕಿದಳ್
ಕೆಯ್ಯ ಮೇಲೇ ತೋರ್ಪನೆನ್ನನೆನುತಿರಿಸಿದಳ್
ಇಂದುಧರನಲ್ಲಿಂದೆ ಮುನ್ನವಂಜುತ್ತೊಂದು
ತಂದಮೃತ ಫಲವನೊಲ್ದಿರಿಸೆ ನೇಹದೊಳಂದು
ಕಂಡಾಗಳಾ ಹಣ್ಣ ಬಸಿರೊಳಗೆ ಬಂದಂತ
ಕಂಡು ಪರಮನ ಪರಮಹರ್ಷದೊಳಗಿದ್ದಂತ
ಭಾವಿಸಲ್ತಿಗೆದಳಾ ಸಂಪದಮಂ ತೆಗೆವಂತೆ
ದೇವಲೋಕದ ಪರಸ್ಥಾನವಮಂ ತೆಗೆವಂತೆ
ತಗೆದು ತಂದಿಕ್ಕಿದಳ್ಳಿದು ಪತಿಯುಗಲಲ್ಲಿ

ಒಗೆಯೊಳಂ ಕೌತುಕಂಬಟ್ಟು ನೋಡುತ್ತಲ್ಲಿ
ನಿಷ್ಟೆ ಕೈಮುಟ್ಟಿ ಪ್ಯೆ ರೋಮಾಂಚಮಾಗುತಿರೆ
ದಿಪ್ಪಸಲ್ಕಣ್ಣಾಳ್ಗೆ ಸವಿಗಳಂ ಸವಿಸುತಿರೆ
ಎಲ್ಲಿಯುದು ಪೇಳೆನಗೆ ಕಾರಣಿಕೆ ಈ ಫಲಂ
ಎಲ್ಲಿಯುದು ಪೇಳಿಲೆ ಮಹಾ ಪುರುಷೆ ಈ ಫಲಂ
ಎಂದು ನಡನಡುಗಿಯಾತಂ ಮುಟ್ಟಲಂಜುತ್ತೆ
ಇಂದುಮುಖಿಯುರಿದನೆಂದಿತ್ತ ನಡನಡಗುತ್ತೆ
ಇದೆ ಸುಪ್ರಸಿದದೆ ಪೇಳೆನಗಿದೆಲ್ಲಿಯ ಫಳಂ
ಹರಕರುಣವಲ್ಲದೀ ನೆಲದೊಳಿಲ್ಲೀ ಫಳಂ
ಎನೆ ಪೇಳಲುಂ ಪೇಳದಿರಬಾರದಿನ್ನೆಂದು
ಮನದೊಳಗೆ ಸಿಡಿಮಿಡಿಗೊಳುತ್ತಲುಸಿರ್ದಳು ನಿಂದು
ಹರಭಕ್ತನೋರ್ವನಾನಂದದಿಂದಂ ಬರಲ್
ಹರುಷದಿಂದೊಂದು ಹಣ್ಣಂ ಕೊಟ್ಟನಿಂತಿರಲ್
ನೀವೀಗಳಾ ಹಣ್ಣನಾರ್ತದಿಂದಂ ಬೇಡೆ
ದೇವನಿರಿಸಿದನಮೃತಫಲವನೊಂದಂ ನೋಡೆ
ಆ ಹಣ್ಣಿದೆಂದು ಪೇಳ್ದೊಡೆ ಸೆಟ್ಟಿ ನಡುಗಿದಂ

ಆಹೊತ್ತೆ ಸತಿಯೆಂಬ ಭಾವ ಮುನ್ನಡುಗಿದಂ
ಮುನ್ನನೇ ಸಂದೇಹಿಸುತ್ತಿರ್ದನೆಲೆ ತಾಯೆ

ಇನ್ನೆನ್ನ ಸತಿಯೆಂಬ ನುಡಿಯಿಂ ಮುಕ್ತಮಾಯ್ತು
ಇಂತು ಕರುಣಿಸಿ ಹರಂ ಪ್ರತ್ಯಕ್ಷವಪ್ಪನೇ
ಇಂತಪ್ಪ ಸತಿಯರುಂಟೇ ಶಿವಂ ಬರ್ಪನೇ
ತಾಯೆ ನೀವೇ ಕೊಳ್ವುದೀ ಹಣ್ಣಿದೆನಗರಿದು
ತಾಯೆ ನಿಮ್ಮಂ ಮರೆಯಿಸಿರ್ದ ಪರಿ ಧರೆಗರಿದು
ಇನಿತು ದಿವಸಂ ನಿಮ್ಮನಂತಿಂತು ನುಡಿದುದಕೆ
ಇನಿತು ಕಾಲಂ ಉದಾಸೀನವಂ ಮಾಡಿದಕೆ
ಕರುಣಿಪುದು ಕಾವುದೆನ್ನಂ ಕಾರಿಕಾಲಮ್ಮ
ಉರವಣಿಪ ಮಾಯೆಯಿಂ ತೆಗೆವುದೆನ್ನಮ್ಮಮ್ಮ
ಇನ್ನೆನಗೆ ನೀವೇ ಗುರುಸ್ಥಾನವೆಲೆ ತಾಯೆ
ಇನ್ನೆನ್ನ ಭವಬಂಧನವನುಡುಗಿಸಲೆ ತಾಯೆ
ಕರಣಿಸುವುದುಪದೇಶವನು ಮಾಳ್ಪುದಿನ್ನೆನಗೆ
ಪರಮಾರ್ಥಮೂರ್ತಿ ಕಾರುಣ್ಯದಿಂ ನೀವೆನಗೆ
ಎಂದು ಹಣ್ಣಂ ಕೊಟ್ಟು ಮೆಯ್ಯಿಕ್ಕಿ ಪಟ್ಟಿರಲ್
ಮುಂದಯಿಪ ಪರವಶದ ಜೆಮರಿಂದೆ ಬಿಳ್ದಿರಲ್

ಕಂಡು ಶಿವಭಕ್ತೆಯಭಿಮಾನಿ ನೆರೆ ಕಂದಿದಳ್
ಗಂಡನಿಂತರಿದನಿನ್ನೇನೆಂದು ಕೊರಗಿದಳ್
ದೇವಭಕ್ತಿಯನಿಂತು ಗಾರುಮಾಡಿದೆ ತಂದೆ
ದೇವ ಮೀಸಲ ಮೋಹವಂ ಸೂಸಿದ್ದೈ ತಂದೆ
ಭಕ್ತಿ ಬೇಸರವಾಯಿತಿನ್ನೆಂತು ಸೈರಿಪೆಂ
ಭಕ್ತಿ ಹುರಿಹಂಚಾಯ್ತು ಇನ್ನೆಂತು ಜೀವಿಪೆಂ
ಕೆಲರರಿಯೆ ಭಕ್ತಿಯಂ ತೋರಿ ಬೇಡಿದರುಂಟೆ
ಪಲರರಿಯೆ ಭಕ್ತಿಯಂ ಸಾರಿ ಮಾಡಿದರುಂಟೆ
ಎಂದಲ್ಲಿ ಬಾಡುತುಂ ಕೋಡುತುಂ ನಡೆ ನೋಡಿ

ಮುಂದಿರ್ದ ಸೆಟ್ಟಿಯೆಗುಪದೇಶಮಂ ಮಾಡಿ
ದೇವನಿತ್ತ ಪ್ರಸಾದದ ಫಳಮುಮಂ ಕೊಟ್ಟು
ದೇವ ಭಾಮಿನಿ ಮನದ ನಿಷ್ಠೆಗಂಡೆಡೆಗೊಟ್ಟು
ಇರೆನಿನ್ನಿರೇ ಜಗಕ್ಕೆನ್ನಮಂ ತೋರಿದಂ

ಹರಭಕ್ತೆ ಎಂದರುಹಿ ಹುರಿಹಂಚುಮಾಡಿದಂ
ಇನ್ನಂಜಲೇಕೆಂದು ಭಸಿತಮಂ ಪೂಸಿದಳ್
ಇನ್ನರಿಯವೇಳ್ಕೆಂದು ರುದ್ರಾಕ್ಷಿಯಿಕ್ಕಿದಳ್

ನಡೆವೆ ನಾನಿಲ್ಲಿರೆಂ ಕೈಲಾಸಪುರದತ್ತ
ವೃಡನೆ ಶರಣೆಂದೆನುತೆ ಕಲಿಯೇರಿ ಮೀರುತ್ತ
ಪೊರಮಟ್ಟಳಮ್ಮಮ್ಮ ಪುರಜನಂ ನೋಡುತಿರೆ
ಪೊರಮಟ್ಟಳಲ್ಲಲ್ಲಿ ಬಂಧುಜನ ಮರುಗುತಿರೆ
ಪುರದ ಪುಣ್ಯಪ್ರಜಂ ನೆರೆದು ಪೊರಮಡುವಂತೆ
ಪುರದ ಪರಮಾಯುಷ್ಯವಿರದೆ ಪೊರಮಡುವಂತೆ
ಬಿಸಿಲನರಿಯದ ರಮಣಿ ಬಿಸಿಲಿಂಗೆ ಮೆಯ್ಯಾಂತು
ಬಿಸುಕಲರಿಯದ ಮಾನಿಯಡಿಯು ಮೇಲಡಿಯಾಂತು
ಉತ್ತರದಿಶಾಭಿಮುಖಿಯಾದಳಾ ಶಿವಭಕ್ತೆ
ಚಿತ್ತದೊಳ್ ಪುರಹರನನಿರಿಸುತಂ ಶಿವಭಕ್ತೆ
ಬಂದಳಾನಂದಭರದಿಂ ಕಾರಿಕಾಲಮ್ಮ
ಬಂದಪ್ಪರಿಚ್ಛೇದದಿಂ ಕಾರಿಕಾಲಮ್ಮ
ಸಕಲ ಸುಖಮಂ ಬಿಸುಟುತುಂ ಕಾರಿಕಾಲಮ್ಮ
ಸಕಳಮಂ ಲೆಕ್ಕಿಸದ ಕಲಿ ಕಾರಿಕಾಲಮ್ಮ
ಬರೆ ನಿಂದುದಲ್ಲಿ ಬಾಂಧವಜನಂ ಪುರಜನಂ
ಬರೆವರಲ್ಬಂದುದಲ್ಲಲ್ಲಿರ್ದ ಪರಿಜನಂ
ಕಾಣಲ್ಕೆ ಬರುತಿರ್ದರೇನೆಂಬೆನಮ್ಮೆಯುಂ

ಜಾಣರರಿವಾ ರೂಪ ಯೌವನದ ಪೇರ್ಮೆಯುಂ
ಪಾಪವುಳ್ಳರ್ಗೆ ಸಿಂಗರದಂತೆ ತೋರುತುಂ
ಪಾಪವಿಲ್ಲದವರ್ಗೆ ತಾಯಂತೆ ತೋರುತುಂ
ಮಲ್ಲಿಕಾಲತೆಗೆ ಶಿವಭಕ್ತಿಯೊದವಿದ ತೆರದೆ
ಸಲ್ಲಲಿತ ಶಶಿಕಳೆಗೆ ನಿಷ್ಠೆಯೊದವಿದ ತೆರದೆ
ಭಕ್ತಿಲತೆ ನಡೆವಂತೆ ನಡೆಯುತಿರ್ದಳ್ನೋಡ
ಭಕ್ತಿವನಿತಾಗಮನದಂತೆ ನಡೆದಳ್ ನೋಡ

ಲಂಬಿಸುವ ಪಾವನತೆಯಂ ರೂಪುದೋರುತಿರೆ
ಇಂಬಿನಿಂ ನಡೆತಂದಳೊಡನೆ ಜನಪೆಯ್ದುತಿರೆ

ಎಳೆಯಶೋಕೆದಳಿರಸುಗುಳ್ವ ಪದತಳದೊಳಗೆ
ಬಳೆದು ಪ್ರದಕ್ಷಿಣಂ ನಳನಳಿಸಿ ತೊಳತೊಳಗೆ
ಕದಳಿಯಂ ಪಳಿವುತಿರ್ಪೂರು ದಂಡಂ ನೋಡ
ಮದನವೈರಿಯ ನಮಸ್ಕಾರ ದಂಡಂ ನೋಡ
ಸರಸಿಯಂ ಪಳಿಕೆಯ್ವ ನಾಭಿಮಂಡಲವಲ್ಲಿ
ಹರಭಕ್ತಿಸಾರ ಮಡುವಿನ ತೆರದೊಳಿರಲಲ್ಲಿ
ಪಂಚಶರಮಂ ಪಳಿವ ನುಣ್ಬೆರಲ ಬಿತ್ತರಂ
ಪಂಚಮುಖ ಪರಿಭಾವಕರ ತೆರದೊಳಿರೆ ಕರಂ
ಪದಕೊರಳ್ಕೇಳಿಸುವ ಕಂಬುವಿನ ತೆರದೊಳಿರೆ
ಕದಪು ಶರ್ವಂ ನೋಳ್ಪ ದರ್ಪಣದ ತೆರದೊಳಿರೆ
ಕಣ್ಣೆರಡು ಚೆಲ್ವಿಂಗೆ ಕಣ್ಮಾಡಿದಂತೆ ಇರೆ
ತಿಣ್ಣವೆನಿಸುವ ಭಕ್ತಿ ಕಣ್ದೆರೆದ ಪರಿಯೊಳಿರೆ
ಅಳಿಕುಲದ ಬಣ್ಣಮಂ ಬರಿಕೆಯ್ವ ಕುಂತಳಂ
ತಲೆಯೂರಿ ನಡೆವಲ್ಲಿಗಾದರದ ಪರ್ತಳಂ
ಇಂತು ಸೌಂದರ್ಯವಂ ಪಾವನತ್ವವನೀವ
ಸಂತತಂ ಶೃಂಗಾರ ರಸದ ಲಹರಿಯನೀವ

ಕಾರಿಕಾಲಮ್ಮೆಯರ ರೂಪಿಂಗೆ ಬಹು ಜನಂ
ಸಾರುತಂ ಬೆಂಬಿಡದೆ ಬರೆ ಕಷ್ಟತರ ಜನಂ
ಕಂಡಲ್ಲಿ ಕಾರಿಕಾಲಮ್ಮೆ ಮನದೊಳ್ನೊಂದು
ಬಂಡ ದಿಂಡೆಗೆ ಮರುಳ್ಗೊಂಡಿರಯ್ಯೋ ಎಂದು
ಅವಿಚಾರ ಮತಿಯರೇನೆಂಬರಿಯರಕ್ಕಟಾ
ಸುವಿಚಾರವೆಳ್ಳನಿತುಮಿಲ್ಲ ನಿಮಗಕ್ಕಟಾ
ಒಳಗು ಹೊರಗಾಗಿ ನೋಡಿರೆ ಎನ್ನ ದೇಹಮಂ
ಬಳಿಕ ಹೇಸಲ್ವೇಳ್ಕುಮರಿಯಿರೇ ಚೋಹಮಂ
ಪಂಚಭೂತಂ ನೆರೆಯೆ ಕಾಯಂ ಪರಿಯೆ ವಾಯು
ಇಚ್ಚೆಗೊಳ್ಳದಿರಿ ಎನ್ನ ರೂಪೆಲ್ಲ ಹ್ಯೇಯ

ಎಂಬ ಬೋಧೆಗೆ ಹೋಗದೊಡನೊಡನೆ ಬರುತಪ್ಪಿರೆ
ಸಂಬದುಸ್ಸೃತ್ತ ಜನಗಳು ಪಿಂತೆ ಬರುತಪ್ಪಿರೆ
ಪೇಸತ್ತು ಪುರಹರಾ ಮಾಯಾತಮೋಹರಾ
ವೇಷವೆನ್ನಂ ಕೊಂಡಪುದು ಪಂಚಶರಹರಾ
ಎಂದು ಮೊರೆಯಿಡೆ ಹರಂ ಶಕ್ತಿಯುಂ ಕೂಡಲಲ್ಲಿ
ನಿಂದು ನಿಷ್ಪ್ರಸಿದಳ್ದೇಹವುಂ ಬಿಡಲಲ್ಲಿ
ಸ್ವೈರಿಸದೆ ಜಂಬತ್ತುವಜ್ಞ ಜನವುಂ ನೋಡಿ
ವೈರಾಗ್ಯಶಸ್ತ್ರದಿಂ ಛೇದಿಸಿಕೊಳಲ್ಬೇಡಿ
ಕಾಮವುಂ ಕ್ರೋಧವುಂ ಲೋಭವುಂ ಬಿದಿರ್ವಂತೆ
ಪ್ರೇಮವುಂ ಮದಮತ್ಸರಂಗಳಂ ಬಿದಿರ್ವಂತೆ
ಮಾಯೆಯುಂ ಬಿದಿರ್ವಂತೆ ಮೋಹವುಂ ಬಿದಿರ್ವಂತೆ
ಛಾಯೆಯುಂ ಬಿದಿರ್ವಂತೆ ಚಂದವುಂ ಬಿದಿರ್ವಂತೆ
ಅವಯವಂಗಳನಲ್ಲಿ ಚಲ್ಲಿವಳು ಛಲದಿಂದೆ

ತವುತವುಗೆ ಓಡಿತ್ತು ಮೂರ್ಖಜನ ಭಯದಿಂದೆ
ಸ್ಥೂಲತನುವಂ ಬಿಟ್ಟು ಸೂಕ್ಷ್ಮತನುವಿಂ ನಿಲಲು
ಕೇಳು ಭೃಂಗೀಶನೊಡರಿದ ಅಂದದೊಳ್ನಿಲಲು
ಕಣ್ಣಾಳಿಯು ಮೆಯ್ಯೆಲ್ಲವೆಲುವಾಗಿ ನಿಲಲಲ್ಲಿ
ಬಣ್ಣವಳಿಯಲ್ಕೋಡುತೆಲ್ಲ ಲಘು ಜನವಲ್ಲಿ
ಮರುಳೋ ಪಿಶಾಚಿಯೋ ಓಡೋಡೆನುತ್ತಲ್ಲಿ
ಮರಳಿ ನೋಡಲಮ್ಮದೆಯೋಡಿತ್ತು ಜನವಲ್ಲಿ

ಇಂತು ಮೆಯ್ಯಂ ಬಿದಿರ್ದು ತಾನೋರ್ವಳೇ ನಿಂದು
ಸಂತಸುಖದಿಂ ಶಂಭುವಂ ನೆನೆಯುತುಂ ಬಂದು
ತಲೆಯುಳಿಯೆ ಮೆಯ್ಯೆಲ್ಲವೆಲುವಾಗಿ ನಿಲಲಿಂತೆ
ಕಲಿಯುಗದ ಹೊಲೆಗೆಟ್ಟು ಪುಣ್ಯಾವೇಳ್ತಪ್ಪಂತೆ
ನಡೆತಂದಳಪ್ರತಿಮ ವೈರಾಗ್ಯ ಸಂಯುಕ್ತೆ
ನಡೆತಂದಳೇಕನಿಷ್ಠೆಯ ಭಕ್ತೆಯನುರಕ್ತೆ
ಹರುಷದಿಂ ಹಾಡುತುಂ ಹಿಗ್ಗುತುಂ ಬರವರಲ್
ಪರಮಸಂತೋಷಿಯಾನಂದದಿಂ ಬರವರಲ್

ಕಾಂಚಿಗೆ ಬಡಗಲಿರ್ಪ ತಿರುವಾಲ ಕಾಡೊಳಗೆ
ಪಂಚಮುಖನಿರೆ ಕಂಡಳಲ್ಲಿ ಕಾನನದೊಳಗೆ
ಆಹಾ ಶಿವನೆ ನಿನ್ನ ನಾಟ್ಯಮಂ ತೋರೆನಗೆ
ಆಹಾ ಮಹಾ ನಾಟ್ಯಮಂ ಕರುಣಿಸುವುದೆನಗೆ
ತೋರಯ್ಯ ಘನತಾಂಡವಾಡಂಬರವನೆನಗೆ
ತೋರಯ್ಯ ಮೆಯ್ಯೆಲ್ಲ ಕಣ್ಣಾಗಿ ನೋಳ್ಪೆನಗೆ
ಎಂದು ಬಿನ್ನೈಸೆ ಶಂಕರನಲ್ಲಿ ತೋರಿದಂ

ನಿಂದು ನೋಡಲ್ಕೊಡೆ ಗಗನಮಂ ಮೀರಿದಂ
ಜಡೆ ನಭವನೆಡೆಗೊಂಡು ಪರ್ವಿ ಪಲ್ಲವಿಸುತಿರೆ
ಹೆಡೆಗಳಂ ಬಿರ್ಚಿಯುರಗಂಗಳಾಡುತ್ತಮಿರೆ
ಹಸ್ತಂಗಳೆಣ್ದೆಸೆಗೆ ನಟಣೆಯಿಂ ನಲಿಯುತಿರೆ
ವಿಸ್ತರದ ಚರಣಪಲ್ಲವವೆತ್ತಿ ಮೆರೆಯುತಿರೆ
ಮೇಲೆ ವಿಷ್ವಕ್ಸೇನನಲ್ಲಿ ತಿತ್ರನೆ ತಿರುಗೆ
ಕಾಲನೇವುರವಲ್ಲಿ ಝುಣಝುಣಿಸುತಂ ತಿರುಗೆ
ಡಮರುಗದ ನಾದಮುಂ ಢಣಢಣಮೆನುತ್ತಿರಲ್
ಅಮಮ ಘಂಟಾನಾದವಲ್ಲಿ ಢಣಢಣಮೆನಲ್
ಪುಲಿದೊವಲಪೊಂಗೆಜ್ಜೆಗಳ್ಘಲಿಘರ್ಲಿರೆನಲ್
ಚಲಿಸುವಂದುಗೆಯ ದನಿ ಘುಲುಘುಲುಕು ಘುಲುಕೆನಲ್
ಕೆಯ್ಯ ಬೊಮ್ಮನ ಸಿರಮುದರಿಯುರೇ ಎನುತಿರಲ್
ಮೆಯ್ಯ ದೇವರ ಹಿಂಡುದಲೆ ಮಾಲೆಯು ಬುಜಿನಲ್
ಗಜಚರ್ಮವಲ್ಲಿ ಜೊಂಪಿಸಿ ಝಾಡಿ ಮಾಡುತಿರೆ
ಭುಜಹತ್ತು ದೆಸೆಗಳಂ ಕೌಂಕುಳೊಳಿರಿಂಕುತಿರೆ
ಕೋಟಿರವಿಕಾಂತಿಯಂ ಪದನಖಂ ಸೂಸುತಿರೆ
ಕೋಟಾನುಕೋಟಿ ನಾಟ್ಯಂಗಳಂ ಚೆಲ್ಲುತಿರೆ
ಬ್ರಹ್ಮ ವಿಷ್ಣ್ವಾದಿಗಳ್ಜಯಜೀಯಮೆನುತಮಿರೆ
ಬ್ರಹ್ಮಾಂಡಭಾಂಡವಾ ತಾಂಡವಕೆ ಬಿರಿವುತಿರೆ
ತಾನಾಡೆಯುಮೆಯಾಡೆ ಹರಿಯಜಸುರರಾಡೆ
ತಾನಾಡೆ ಜಗವಾಡೆ ಜೀವರಾಶಿಗಳಾಡೆ
ಆಡುತಿರ್ದಂ ವಿರೂಪಾಕ್ಷ ಶಿವನಮ್ಮಮ್ಮ
ಆಡುತಿರ್ದಂ ಗಣಂಗಳ್ನೋಡಲಮ್ಮಮ್ಮ

ಇಂತಾಡೆ ನೋಡಿ ಅಂಜಿದಳಮ್ಮ ಶರಣೆನುತೆ
ಕಂತುಹರ ಶರಣೆನುತೆ ನಾಲ್ಕು ಸಾಲ್ಗೆಂದೆನುತೆ
ಕಣ್ಮುಚ್ಚಿ ನಡಗುತಿರ್ದಳ್ಕಾರಿಕಾಲಮ್ಮ
ಅಣ್ಮುಗೆಟ್ಟರಿವುಗೆಟ್ಟಳ್ಕಾರಿಕಾಲಮ್ಮ
ಇರೆ ಹರಂ ಕರುಣದಿಂದಂ ನಾಂಟ್ಯಮಂ ಮಾಣ್ದು
ಸುರರೆಲ್ಲ ಚೋದ್ಯಮೆನೆ ಕಾರುಣ್ಯಮಂ ಮಾಣ್ದು
ಕಂಡಪ್ಪೆ ಕಾರಿಕಾಲಮ್ಮ ಎಲೆ ನಾಂಟ್ಯಮಂ
ಕಂಡಿರೇಯಮ್ಮಯರೆ ಎನ್ನ ಚೆಲ್ವಾಟಮಂ
ಎನೆ ಕಂಡೆ ನಾ ಕಂಡೆ ಎನ್ನಳವೆ ಬದುಕಿದೇಂ
ಎನಗೆ ತೋರಿದೆ ದಯಾಪರತೆಯಂ ಬರ್ದುಕಿದೇಂ
ಹರಿಯಜರು ಕಾಂಬರೇ ನಿಮ್ಮ ಪೊಸ ನಾಂಟ್ಯಮಂ
ಪರವೇದಪರಿಪಪೇ ನಿಮ್ಮ ಕಾಲಾಟಮಂ
ಎಲೆ ದೇವ ಎನ್ನ ಭಾಗ್ಯದ ಜೆಳಿಗೆ ಸರಿಯುಂಟೆ
ಎಲೆ ದೇವ ನಿಮ್ಮ ನಾಟ್ಯಕ್ಕಿನ್ನು ಸರಿಯುಂಟೆ
ಎಂದು ಕುಣಿದಾಡುತಿರ್ದಮ್ಮೆಯಂ ಮಿಗೆ ಕಂಡು
ಇಂದುಶೇಖರನಲ್ಲಿ ಹರ್ಷಮಂ ಕೈಕೊಂಡು
ನದೆ ತಾಯೆ ಕೈಲಾಸಪುರಕೆನುತ್ತಂ ಪೇಳ್ದು
ಪ್ಪೃಡನಲ್ಲಿ ಲಿಂಗದೊಳೈಕ್ಯನೊಲವಂ ತಾಳ್ದು

ಮಿಗೆ ಕಾರಿಕಾಲಮ್ಮ ಮಿಗೆ ಕೌತುಕಂಗೊಂಡು
ಸೊಗಯಿಸುವ ಶರಣರಡಿ ಹೆಜ್ಜೆಗಳುಮಂ ಕಂಡು
ಆಹಾ ಶರಣರೆಲ್ಲ ನಡೆದ ಹಾದಿಯ ಹೆಜ್ಜೆ
ಆಹಾ ಎನ್ನೊಡೆಯರೊಲವಿಂ ನಡೆದ ಹೊಸ ಹೆಜ್ಜೆ
ಇಂತಿವೆನ್ನಯ ಶಿರದ ಮೇಲಿರಲ್ವೇಳ್ಕೆಂದು
ಚಿಂತಿಸಿದಳೊಂದು ತೆರನಂ ಚಿತ್ರದೊಳಗೊಂದು
ಅವರೆಲ್ಲ ನಡೆದಂತೆಯಾಂ ನಡೆಯಬಲ್ಲೆನೇ
ಅವರಂತೆ ಸಾಮರ್ಥ್ಯವುಳ್ಳೊಡಾಂ ಬಲ್ಲೆನೇ
ಎನ್ನ ಕೈ ಕಾಲಾಗಿ ನಡೆವೆ ನಾನಿಂತಿಲ್ಲಿ
ಎನ್ನ ತಲೆಯುಡಿಯಾಗಿ ನಡೆದು ತೋರುವೆನಿಲ್ಲಿ
ಎಲೆ ಶರಣರಡಿಗಳಿರ ಶಿವನಲ್ಲಿಗೊಯ್ಯಿರೇ
ಎಲೆ ಹೆಜ್ಜೆಗಳಿರ ಕೈಲಾಸಕ್ಕೆ ಕಳಿಪಿರೇ

ಎಂಮ ಶರಣರ ಹೆಜ್ಜೆಯೊಳ್ನಂಬಿ ತಲೆಯಿಟ್ಟು
ಬಂದಳೊಂದೊಂದು ಗಳಿಗೆಗದೊಂದಡಿಯನಿಟ್ಟು
ಶಿವಭಕ್ತಿಯುಕ್ತಿ ತಲೆ ಕೆಳಗಾದ ಚಂದದಿಂ
ಶಿವನಿಷ್ಠೆ ಸೊರ್ಕೆ ತಲೆಯೂರಿತೆಂಬಂದದಿಂ
ಎಲ್ಲಾ ನರಾಳಿ ಬೇರ್ಮೊದಲಾಗಿ ನಡೆವುತಿರೆ
ಇಲ್ಲಿ ಬೇರ್ಕೆಳಗಾಗಿ ಸಸಿನದೊಳ್ನಡೆವುತಿರೆ
ಇತ್ತ ಕೈಲಾಸಪಥದೊಳ್ನಂಬಿ ಚೇರಮರ್
ಮತ್ತಗಜತುರಗಂಗಳನೇರಿ ಬರುತಮವರ್
ಕಂಡಿದೆಂದಿಂಗೆ ಬರ್ಪಿರೆಯಮ್ಮಯೆಂದೆನುತೆ
ಖಂಡೇಂದುಮೌಳಿಯ ಪುರಕ್ಕೆ ನೀವೆಂದೆನುತೆ
ಪೋಗಲರ್ಧಿಕೆಯಾದಳಾ ಕಾರಿಕಾಲಮ್ಮ
ನಾಗಭೂಷಂಗೆ ಮೊರೆಯಿಟ್ಟತ್ತಳಮ್ಮಮ್ಮ
ಇಲ್ಲಿಯಳಲಲ್ಲಿ ಸಿಂಹಾಸನಂ ನೆನೆಯಿತ್ತು
ಇಲ್ಲಿ ಮೊರೆಯಿಡಲಲ್ಲಿ ಹರನ ಕಿವಿದಾಗಿತ್ತು
ಅರಿದು ಶರ್ವಂ ತನ್ನ ಮನದ ಕೆಯ್ಯಂ ನೀಡಿ
ತೆರಹರಿದು ತೆಗೆದುಕೊಂಡಂ ಮಹಿಮೆಯಿಂ ಕೂಡಿ
ತೆಗೆದುಕೊಳಲವರಿಂದ ಮುನ್ನವೈಯ್ತಂದಲ್ಲಿ
ಮಿಗೆ ರಜತಗಿರಿಯ ಸೋಪಾನವೇರುತ್ತಲ್ಲಿ
ಇರೆ ನಂಬಿ ಚೇರಮರ್ಕಾಣುತಂ ಬೆರಗಾಗಿ
ಹರಭಕ್ತಿಯಂ ಬೇಡಿಕೊಳುತುಮಿರೆ ಸಿಗ್ಗಾಗಿ

ಕರುಣಿಸುತೆ ನಡೆತಂದಳಪ್ರತಿಮ ಶಿವಭಕ್ತೆ
ಪರಮ ನಂದೀಶ್ವರನ ಬಾಗಿಲ್ಗೆ ಹರಭಕ್ತೆ
ನಂದೀಶ್ವರಂ ಕಂಡು ಕೈಗಳಂ ಮುಗಿವುತಿರೆ
ಬಂದಳೀಶ್ವರನ ಸಭೆ ·ಕಂಡು ಬೆರಗಾಗುತಿರೆ
ಅಲ್ಲಿ ಮೆಯ್ಯೆಲ್ಲ ಎಲ್ವಾಗಿ ತಲೆಯೂರಿ ಬರೆ
ಅಲ್ಲಿ ಪಾರ್ವತಿ ನೋಡಿ ನಡನಡನೆ ನಡುಗುತಿರೆ
ದೇವಾ ಇದೇನೆಂದು ಮರುಳು ಬಂದಿದೆ ದೇವ
ದೇವ ನಾನಂಜಿದಪೆನಿರಲಮ್ಮೆನೆಲೆ ದೇವ

ಎನುತ ಹಿಂದಂ ಪೊಕ್ಕು ಶಂಭುವಂ ಬಿಗಿದಪ್ಪಿ
ಮನಸಿಜಹರನನಲ್ಲಿ ಭಯದಿಂದ ಬಿಗಿದಪ್ಪೆ

ಅಲ್ಲಲ್ಲ ಎಲೆ ಗಿರಿಜೆ ಕಾರಿಕಾಲಮ್ಮೆಯಿವರು
ಅಲ್ಲ ಎಲೆ ಗೌರಿ ನಿಮ್ಮತ್ತೆ ನಮ್ಮಮ್ಮೆಯಿವರು
ಎನ್ನಯ ಜನನಿ ಎನಗೆ ಹಣ್ಣಿತ್ತ ಹಿತವೆಯರ್
ಎನ್ನನಪ್ಪಿ ನಿಮ್ಮತ್ತೆ ಕಾರಿಕಾಲಮ್ಮೆಯರ್
ಮರುಳೆಂಬರೇ ವಿಚಾರಂ ನಿನಗೆ ತೋರದೆನೆ
ಮರುಳೆನಲ್ಕಾಗದಾ ದೇವಿ ಪೊಡಮಡುವುದೆನೆ
ಕೇಳ್ದಲ್ಲಿ ಕಾರಿಕಾಲಮ್ಮ ಮನದೊಳ್ನೊಂದು
ಆಳ್ದ ಇಂತೆಂಬರೇ ನಿಮ್ಮ ತೊಳತ್ತನೆಂದು
ಎನಗೆ ನೀ ತಂದೆ ಪಾರ್ವತಿ ತಾಯಿ ಎಲೆ ದೇವ
ಎನಗೆ ನೀವಿರ್ಬರುಂ ಜೀವಮುನ್ನತಿ ದೇವ
ಎನುತಲ್ಲಿ ಶಂಕರನ ಚರಣತಳದೊಳ್ಬೀಳೆ
ಅನುನಯದೊಳೆತ್ತಿದಂ ಸಭೆ ಕೌತುಕದೊಳಾಳೆ
ಎತ್ತಿ ಮೆಯ್ಯಂ ತಡವಿ ನೋಡಲೆಯುಮಾದೇವಿ
ಚಿತ್ತದ ವಿರಕ್ತಿಯುಂ ಕಂಡಾ ಮಹಾದೇವಿ
ಮೆಯ್ಯೆಲ್ಲವದಿರ್ದು ಬಿದಿರ್ದು ನಿಂದವರುಂಟೆ
ಕೆಯ್ಯ ಕಾಲಾಗಿ ತಲೆಯೂರಿ ನಡೆದವರುಂಟೆ
ಭಾಪುರೇ ಜಗದ ತಾಯಾಗಿ ಸಲೆ ಸಂದಮ್ಮ
ಭಾಪು ಮಜಭಾಪುರೇ ಎಲೆ ಕಾರಿಕಾಲಮ್ಮ
ಎಂದಲ್ಲಿ ಗಣಕುಲಕೆ ತೋರುತುಂ ಬೀರುತುಂ
ಸಂದ ಹರಿಬೊಮ್ಮರ್ಗೆ ಹೇಳುತುಂ ಹಿಗ್ಗುತುಂ
ಗಣಪದವಿಯುಂ ಕಾರಿಕಾಲಮ್ಮೆಗೊಲಿದಿತ್ತು
ಗಣನಿವಹದೊಳ್ಸಲಿಸಿ ಪರಮಸುಖಮುಂ ಪೊತ್ತು
ಮೇರುಚಾಪಂ ಮಂತ್ರಮೂರ್ತಿ ಶಿವನೊಪ್ಪಿದಂ
ತಾರಾದ್ರಿಯುರಮನೆಯೊಳಿಂದುಧರನೊಪ್ಪಿದಂ
ಬ್ರಹ್ಮಶಿರಕೇಶದರ್ಭಾಂಕುರದ ಕೆಂದಳಂ
ಅಮ್ಮಮ್ಮ ಪುಲಿದೊವಲದೋವರಿಯ ನಿರ್ಮಳಂ

ಗಜಚರ್ಮಮುತ್ತರೀಯದ ಮಹಾವಸ್ತ್ರಾಣಂ
ಆಜನುಂ ತ್ರಿಶೂಲದಂಡದ ನಿತ್ಯನಿರ್ಗುಣಂ
ಭಕ್ತಜನ ಹೃದಯಸರಸಿಜಹಂಸನೊಪ್ಪಿವಂ
ಭಕ್ತನಿಧಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ತಲೆಯೂರಿ ನಡೆದು ದೇವಾ।
ಚಲವುಂ ನೆರೆ ಪೊಕ್ಕು ಕಾರಿಕಾಲಮ್ಮನು ನಿ
ರ್ಮಲ ಸುತನೆಂದೊಲವಿಂದಂ।
ಸಲಹೆನ್ನಂ ದೇವ ಹಂಪೆಯ ವಿರೂಪಾಕ್ಷಂ॥

ಶುದ್ಧಾಶುದ್ಧ ಪತ್ರಿಕೆ.

ಪುಟ.	ಓಳಿ.	ಅಶುದ್ಧ.	ಶುದ್ಧ.
೩	೨೩	ಮುಸುಳಿಪುದೆ	ಮಸುಳಿಪುದೆ
೨೩	೨೪	ಕಮಾಲಾಕ್ಷ	ಕಮಲಾಕ್ಷ
೨೫	೧೫	ಚಿಂತಯಿಂ	ಚಿಂತೆಯಿಂ
೨೬	೧೮	ಸತತಂ	ಸಂತತಂ
೨೭	೯	ಪ್ರಸಾದತತಿ	ಪ್ರಾಸಾದತತಿ
೩೨	೬	ಗೊಗೆ	ಗೂಗೆ